ಸಿ.ಪಿ.ಐ.(ಎಂ) ಜಯಭೇರಿ

ನವೆಂಬರ್ ಕೊನೆಗೆ ತ್ರಿಪುರಾ ರಾಜ್ಯದಲ್ಲಿ ೩ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದಿರುವ ಉಪಚುನಾವಣೆಗಳಲ್ಲಿ ೩ ಸ್ಥಾನಗಳಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಸಾಕಷ್ಟು ಮತಗಳ ಅಂತರದಿಂದ ಜಯಭೇರಿ ಹೊಡೆದಿರುವರು. ಛಿದ್ರಕಾರಿ ಶಕ್ತಿಗಳು ಮತ್ತು ಸರ್ವಾಧಿಕಾರಿ ಕಾಂಗ್ರೆಯ ಪಿತೂರಿಗಳಿಗೂ, ಸುಳ್ಳು ಪ್ರಚಾರಕ್ಕೂ ತ್ರಿಪುರಾದ ಜನತೆ ಉತ್ತರ ನೀಡಿದೆ. ಪಕ್ಷದ ತ್ರಿಪುರಾ ಘಟಕಕ್ಕೂ, ಅಲ್ಲಿಯ ಜನತೆಗೂ ಅಭಿನಂದನೆಗಳು.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 49 ಡಿಸೆಂಬರ್ 6, 1981 ಬೆಲೆ : 60 ಪೈಸೆ

ಪಕ್ಷದ ರಾಜ್ಯ ಸಮ್ಮೇಳನದ ಸಂದರ್ಭದ ವಿಶೇಷ ಲೇಖನ

ಸಾಮೂಹಿಕ ಕ್ರಾಂತಿಕಾರೀ ಪಕ್ಷ ಕಟ್ಟುವಲ್ಲಿನ ಸಮಸ್ಯೆಗಳು

ನಮ್ಮ ಪಕ್ಷದ ಹನ್ನೊಂದನೇ ಸಮ್ಮೇಳನಕ್ಕೆ ಹೋಗುವ ಮೊದಲು ಹತ್ತನೇ ಸಮ್ಮೇಳನದ ನಂತರ ಪಕ್ಷದ ಕಾರ್ಯನೀತಿಯನ್ನು ಎಷ್ಟರಮಟ್ಟಿಗೆ ಜಾರಿಗೊಳಿಸಲಾಗಿದೆಯೆಂಬುದರ ವಿಮರ್ಶೆ ನಡೆಸುವುದು ಯೋಗ್ಯ. ನಮ್ಮ ಪಕ್ಷದ ಚರಿತ್ರೆಯಲ್ಲಿ ಹತ್ತನೇ ಸಮ್ಮೇಳನ ಒಂದು ಪ್ರಮುಖ ಹೆಜ್ಜೆ. ಅಲ್ಲಿ ನಾವು ನಮ್ಮ ರಾಜಕೀಯ ಹಾಗೂ ಕಾರ್ಯತಂತ್ರ ನೀತಿಯ ವಿಮರ್ಶೆ ನಡೆಸಿದೆವು. ಈ ಸಮ್ಮೇಳನ ಅಂಗೀಕರಿಸಿದ ವಿಮರ್ಶಾವರದಿಯಲ್ಲೇ ಸಾಲ್ಕಿಯಾ ಪ್ಲೀನಮ್ ನಿರ್ಣಯಗಳ ಮೂಲವಿರುವುದು.

1978ರಲ್ಲಿ ಜಲಂಧರ್‌ನಲ್ಲಿ ಹತ್ತನೇ ಸಮ್ಮೇಳನ ಕೂಡುವಾಗ ಕಾಂಗ್ರೆಸ್ ಆಡಳಿತದ ಗುತ್ತೇದಾರಿಕೆ 1977ರ ಚುನಾವಣೆಯಲ್ಲಿ ಜನತೆ ತೋರಿಸಿದ ತುರ್ತುಪರಿಸ್ಥಿತಿ ವಿರೋಧೀ ಅಲೆಯ ಹೊಡೆತದಿಂದ ಮುರಿದುಬಿದ್ದಿತ್ತು. 1977ರ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಸೋತ ನಂತರ ಪ್ರಜಾಪ್ರಭುತ್ವ ಹಕ್ಕುಗಳನ್ನು ಮರಳಿ ಪಡೆಯುವಂತಾದಾಗ ನಾವು ನಮ್ಮ 1975ರ ತಪ್ಪು ಹೇಳಿಕೆಯನ್ನು ತಿದ್ದಿಕೊಳ್ಳಬೇಕಾಯಿತು. ಆಂತರಿಕ ತುರ್ತುಪರಿಸ್ಥಿತಿ ಘೋಷಿಸುವ ಮುಂಚಿನ ದಿನಗಳು ಮತ್ತೆ ಬರಲಾರವು ಎಂದು ನಾವಾಗ ಹೇಳಿದ್ದೆವು. 1972ರಿಂದ 1978ರ ವರೆಗಿನ ಬೆಳವಣಿಗೆಗಳನ್ನು ಸ್ವವಿಮರ್ಶಾತ್ಮಕವಾಗಿ ಪರೀಕ್ಷಿಸಿ ವಿವಿಧ ಬಂಡವಾಳಶಾಹೀ-ಭೂಮಾಲೀಕ ಪಕ್ಷಗಳ ನಡುವಿನ ವ್ಯತ್ಯಾಸಗಳನ್ನು ನಾವು ಸಂಪೂರ್ಣವಾಗಿ ಅಂದಾಜುಮಾಡಿರಲಿಲ್ಲವೆಂಬ ನಿರ್ಧಾರಕ್ಕೆ ಬಂದೆವು. ಈ ತಪ್ಪುಗಳನ್ನು ಸರಿಪಡಿಸಿಕೊಂಡ ನಂತರ ಹತ್ತನೇ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳಲ್ಲಿ ಜನತಾಪಕ್ಷದ ವರ್ಗಚಾರಿತ್ರ್ಯ ಕಾಂಗ್ರೆಸ್‌ನದಕ್ಕಿಂತ ಭಿನ್ನವಾಗಿಲ್ಲವೆಂದೂ, ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ ಹಾಗೂ ಅದರಿಂದಾಗಿ ಹರಡುತ್ತಿರುವ ಸಾಮೂಹಿಕ ಚಳುವಳಿಗಳು ಆಳುವ ಪಕ್ಷ ಸರ್ವಾಧಿಕಾರೀ ಕ್ರಮ ಕೈಗೊಳ್ಳುವಂತೆ ಮಾಡುತ್ತವೆಯೆಂದೂ, ಪಕ್ಷ ಜನತೆಯನ್ನು ಸಂಘಟಿಸಲು ಎಡ ಹಾಗೂ ಪ್ರಜಾಪ್ರಭುತ್ವ ಮೈತ್ರಿಕೂಟವನ್ನು ಕಟ್ಟಿ ಜನತೆಯ ಹೋರಾಟಗಳ ಮೂಲಕ ಸಾಮಾಜಿಕ-ಆರ್ಥಿಕ ಬದಲಾವಣೆ ತರುವ ಉದ್ದೇಶ ಹೊಂದಿರುತ್ತದೆಯೆಂದೂ, ಪ್ರಜಾಪ್ರಭುತ್ವ ಹಕ್ಕುಗಳನ್ನು ದೃಢಗೊಳಿಸಿ ಅದನ್ನು ವಿಸ್ತರಿಸುವುದಕ್ಕಾಗಿ ಒಂದು ವಿಶಾಲ ವೇದಿಕೆ ಒದಗಿಸುವ ಲಕ್ಷ್ಯಹೊಂದಿದೆಯೆಂದೂ ಜನತಾ ಹಾಗೂ ಕಾಂಗ್ರೆಸ್ ಪಕ್ಷಗಳಲ್ಲಿನ ಪ್ರಜಾಪ್ರಭುತ್ವವಾದಿಗಳು ಹಾಗೂ ಸಮಾಜವಾದಿಗಳನ್ನು ಪುನಃ ಒಂದುಗೂಡಿಸುವುದಕ್ಕಾಗಿ ನಾವು ಕೆಲಸಮಾಡಬೇಕೆಂದೂ ತೀರ್ಮಾನಿಸಿದೆವು.

ಹತ್ತನೇ ಸಮ್ಮೇಳನದ ಆದೇಶಕ್ಕನುಸಾರವಾಗಿ 1978ರ ಅಂತ್ಯದಲ್ಲಿ ಒಂದು ಕೇಂದ್ರ ಪ್ಲೀನಮ್ ಸಭೆ ಪಕ್ಷದ ಸಂಘಟನೆಗೆ ಸಂಬಂಧಪಟ್ಟಂತೆ ಇರುವ ಪ್ರಶ್ನೆಗಳನ್ನು ಬಗೆಹರಿಸುವುದಕ್ಕಾಗಿ ನಡೆಯಿತು. ಹನ್ನೊಂದನೇ ಸಮ್ಮೇಳನಕ್ಕೆ ಹೋಗುವ ಮುನ್ನ ಸಾಲ್ಕಿಯಾ ಪ್ಲೀನಮ್, ಅದರ ನಿರ್ಣಯಗಳು ಹಾಗೂ ಇವುಗಳನ್ನು ಜಾರಿಗೊಳಿಸಿದುದರ ಬಗೆ ಇವು ನಾವು ಪರಿಶೀಲಿಸಬೇಕಾದ ಪ್ರಮುಖ ಅಂಶಗಳು

ಸಾಲ್ಕಿಯಾ ಪ್ಲೀನಮ್‌ನ ನಿರ್ಣಯಗಳು ಅದುವರೆಗೆ ಪಕ್ಷದ ಬೆಳವಣಿಗೆಯನ್ನು ಸೀಮಿತಗೊಳಿಸಿದ್ದ ಪಂಥವಾದೀ ತಿಳುವಳಿಕೆಗಿಂತ ತೀವ್ರವಾಗಿ ಭಿನ್ನವಾಗಿದ್ದವು. ಪಕ್ಷದ ಇದ್ದ ನೆಲೆಗಳನ್ನು ದೃಢಪಡಿಸಿಕೊಳ್ಳಬೇಕೋ ಅಥವಾ ಹೊಸ ಕ್ಷೇತ್ರಗಳಿಗೆ ವಿಸ್ತರಿಸಬೇಕೋ ಎಂಬ ಬಗ್ಗೆ ಇದ್ದ ವಿವಾದವನ್ನು ಯೋಗ್ಯ ಸಮಯದಲ್ಲಿ ಪರಿಹರಿಸಿ ದೃಢೀಕರಣ ಹಾಗೂ ವಿಸ್ತರಣೆ ಇವೆರಡೂ ಜತೆ-ಜತೆಯಾಗಿಯೇ ಮುಂದುವರಿಯುತ್ತವೆಯೆಂದು ಹೇಳದಿರುತ್ತಿದ್ದರೆ ಪಕ್ಷ ಮುನ್ನಡೆ ಸಾಧಿಸಲು ಹಾಗೂ ರಾಜಕೀಯವಾಗಿ ಮಧ್ಯಪ್ರವೇಶಮಾಡಲು ಸಾಧ್ಯವಾಗುತ್ತಿರಲಿಲ್ಲ. ಇತರ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳೊಡಗೂಡಿಕೊಂಡು ಮಾರ್ಚ್ 26ರ ಕಿಸಾನ್ ರ್‍ಯಾಲಿ, ನವೆಂಬರ್ 23ರ ಕಾರ್ಮಿಕರ ಪಾರ್ಲಿಮೆಂಟ್ ಚಲೋ ಹಾಗೂ ವಿಭಿನ್ನ ರಾಜ್ಯಗಳಲ್ಲಿ ಶಕ್ತಿಶಾಲೀ ರೈತ ಹೋರಾಟಗಳನ್ನು ಸಂಘಟಿಸಲು ನಮಗೆ ಸಾಧ್ಯವಾಯಿತು ಎಂಬುದೇ ನಮ್ಮ ಪಕ್ಷ ಹೊಸ ಪ್ರದೇಶಗಳಿಗೆ, ವಿಶೇಷವಾಗಿ ಹಿಂದೀಮಾತನಾಡುವ ಪ್ರದೇಶಗಳಿಗೆ ಹರಡಿ, ನಾವು ರಾಜಕೀಯ ಮುನ್ನಡೆ ಸಾಧಿಸಲು ಹಾಗೂ ಆ ಮೂಲಕ ನಮ್ಮ ಬಲವನ್ನು ಕ್ರೋಢೀಕರಿಸಿಕೊಳ್ಳಲು ನಮಗೆ ಸಾಧ್ಯವಾಗಿದೆ ಎಂಬುದಕ್ಕೆ ಪುರಾವೆ. ನಾವು ಬಲಶಾಲಿಗಳಾಗಿರುವೆಡೆಯಲ್ಲೇ ಭದ್ರವಾಗಿ ನೆಲೆಯೂರಬೇಕೆಂಬ ಹಳೆಯ ಪಂಥವಾದೀ ತಿಳುವಳಿಕೆಯನ್ನೇ ನಾವು ಇಟ್ಟುಕೊಂಡಿದ್ದು ಕೂತಿದ್ದರೆ ನಾವು ಹತ್ತನೇ ಸಮ್ಮೇಳನದ ರಾಜಕೀಯ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರಲು ಆಗುತ್ತಿರಲಿಲ್ಲ.

ಪಕ್ಷದ ಸರಿಯಾದ ಸಂಘಟನಾತ್ಮಕ ಕಾರ್ಯನೀತಿ ವರ್ಗಹೋರಾಟಗಳ ಮೂಲಕ, ಪೊಲಿಟ್‌ಬ್ಯೂರೋ, ಕೇಂದ್ರಸಮಿತಿ, ಪಕ್ಷದ ಸಮ್ಮೇಳನ ಅಥವಾ ಪ್ಲೀನಮ್‌ನ ನಿರ್ದೇಶನಗಳ ಮೂಲಕ ಮೂಡಿಬರುತ್ತದೆ. ಪಕ್ಷ ಇತ್ತೀಚಿನ ವರ್ಷಗಳಲ್ಲಿ ಪಡೆದ ಅನುಭವಗಳ ಆಧಾರದ ಮೇಲೆ ವಿಮರ್ಶೆಗೊಂಡ ರಾಜಕೀಯ ಹಾಗೂ ಕಾರ್ಯತಂತ್ರದ ನೀತಿಗಳೊಂದಿಗೆ ಸಂಘಟನಾತ್ಮಕ ನೀತಿ ನೇರ ಸಂಬಂಧ ಹೊಂದಿದೆ.

ಮೊದಲನೆಯದಾಗಿ, ಒಂಭತ್ತನೇ ಸಮ್ಮೇಳನ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ವೇದಿಕೆಯೊಂದನ್ನು ನಿರ್ಮಿಸಲು ಕೆಲಸಮಾಡಬೇಕೆಂದು ಕರೆಯಿತ್ತಿದ್ದರೂ, ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲಿ ನಮ್ಮ ವರ್ಗಶತ್ರುಗಳು ಅರೆಫ್ಯಾಸಿಸ್ಟ್ ಭಯೋತ್ಪಾದಕರನ್ನು ಹರಿಯಬಿಟ್ಟಿದ್ದರೂ ಬೇರೆಯಾವುದೇ ಎಡ ಹಾಗೂ ಪ್ರಜಾಪ್ರಭುತ್ವವಾದೀ ಮಿತ್ರರನ್ನು ಗಳಿಸಿಕೊಳ್ಳುವುದರಲ್ಲಿ ನಾವು ಯಶಸ್ವಿಯಾಗಲಿಲ್ಲ.

1971ರ ಬಂಡವಾಳಶಾಹೀ-ಭೂಮಾಲಕ ಪಕ್ಷಗಳ "ಮಹಾ ಮೈತ್ರಿಕೂಟ" ಅವರೆತ್ತಿದ್ದ ಬಲಪಂಥೀಯ ಘೋಷಣೆಗಳು ಇತ್ಯಾದಿಗಳು ನಮ್ಮ ಮೇಲೆ ಉಂಟುಮಾಡಿದ ಪರಿಣಾಮಗಳ 'ಉಳಿಕೆಯ ಅಂಶ' ನಮ್ಮ ಮೇಲೆ ಇನ್ನೂ ಇತ್ತು. ಅದರಿಂದ ಹೊರಬಂದು ಆಳುವವರ್ಗಗಳ ಪಕ್ಷಗಳ ನಡುವಿನ ಕಿತ್ತಾಟ ಹಾಗೂ ಒತ್ತಡಗಳನ್ನು ಗುರುತಿಸುವ ಬದಲು ನಾವು ಈ ಎರಡೂ ಪಾಳೆಯಗಳನ್ನು ಬಂಡವಾಳಶಾಹೀ-ಭೂಮಾಲಕ ಎಂದು ಒಂದಾಗಿಯೇ ಪರಿಗಣಿಸಿ ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವಿನ ವ್ಯತ್ಯಾಸವನ್ನು ಲಾಭವಾಗಿ ಗಿಸಿಕೊಳ್ಳುವಲ್ಲಿ ಸೋತೆವು.

ಬಂಗಾಳ ಹಾಗೂ ಕೇರಳದಲ್ಲಿನ ನಮ್ಮ ಚಳುವಳಿಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದಲೂ ಅವನ್ನು ಬೇರೆಡೆಗೆ ವಿಸ್ತರಿಸುವುದು ಹಾಗೂ ಸರ್ವಾಧಿಕಾರಕ್ಕೆ ವಿರೋಧಿಯಾಗಿರುವ ಪಕ್ಷಗಳ ಸಹಕಾರ ಪಡೆಯುವುದು ಅಗತ್ಯವಾಗಿತ್ತು. ಸಿ. ಪಿ. ಐ. ಇಂದಿರಾ ಪಾಳೆಯಕ್ಕೆ ಹೋಗಿ, ಸಮಾಜವಾದಿಗಳು ವಿರೋಧೀ ಪಾಳೆಯ ಸೇರಿಕೊಂಡು ನಾವು ಏಕಾಂಗಿಗಳಾದುದರಿಂದ ಇಂದಿರಾಗಾಂಧಿಗೆ ನಮ್ಮನ್ನು ಪ್ರತ್ಯೇಕಗೊಳಿಸಿ ನಿರ್ದಯವಾಗಿ ಹಲ್ಲೆ ನಡೆಸಲು ಸಾಧ್ಯವಾದದ್ದು. ಭಾರತೀಯ ರಾಜಕಾರಣದಲ್ಲಿ ಅತ್ಯಂತ ದೃಢ ಮನೋಭಾವದ ಪಕ್ಷವಾದ ನಮ್ಮ ಮೇಲೆ ನಡೆದ ದಾಳಿ 1967ರಲ್ಲಿ ಕಾಂಗ್ರೆಸ್ ಎಂಟು ರಾಜ್ಯಗಳಲ್ಲಿ ಸೋತಿದ್ದರ ಪರಿಣಾಮವೇ. ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಹಾಗೂ ಗರೀಬೀ ಹಟಾವೋದಂತಹ ಜನರನ್ನು ಮರಳುಮಾಡುವ ಘೋಷಣೆ ಈ "ಎಡಪಂಥೀಯ ಮುಖವಾಡ" ಧರಿಸಿ ಇಂದಿರಾ ಎಡಪಂಥೀಯರ ಒಗ್ಗಟ್ಟನ್ನು ಮುರಿದು ನಮ್ಮನ್ನು ಪ್ರತ್ಯೇಕಗೊಳಿಸಲು ಸಾಧ್ಯವಾಯಿತು. ನಮ್ಮ ಪಕ್ಷದ ಮೇಲೆ ದಾಳಿ ನಡೆಸಿದ ನಂತರ ಆಕೆ ಬಂಡವಾಳಶಾಹೀ- ಭೂಮಾಲಕ ಪಾಳೆಯದ ವಿರೋಧ ಪಕ್ಷಗಳ ಮೇಲೆ ಆಕ್ರಮಣ ನಡೆಸಿದಳು. ಕೊನೆಗೆ ತುರ್ತುಪರಿಸ್ಥಿತಿಯ ಅಂತ್ಯಕಾಲದಲ್ಲಿ ಡಾಂಗೆಯನ್ನೂ ಆಕೆ ಬಿಡಲಿಲ್ಲ.

ಈ ಎಲ್ಲಾ ಘಟನೆಗಳಿಂದ ನಮಗೆ ತಿಳಿಯುವುದೇನೆಂದರೆ ನಮ್ಮ ನೆಲೆಗಳನ್ನು ಭದ್ರವಾಗಿಟ್ಟುಕೊಳ್ಳಲಿಕ್ಕಾದರೂ ನಾವು ಪ್ರಾದೇಶಿಕವಾಗಿ ವಿಸ್ತರಿಸಬೇಕಿತ್ತು ಹಾಗೂ ಪಂಥವಾದೀ

(ಕಡೇ ಪುಟ ನೋಡಿ)

ಮಂಗಳೂರಿನಲ್ಲಿ ನಡೆಯಲಿರುವ ಪಕ್ಷದ ೧೧ನೇ ರಾಜ್ಯ ಸಮ್ಮೇಳನಕ್ಕೆ ಮುನ್ನಡೆಯಿರಿ

ವಿಮರ್ಶೆ

ಚೆಲುವು ಸೂಸುವ ಕಥೆಗಳು

-ಗುಡಿಹಳ್ಳಿ ನಾಗರಾಜ

["ಚೆಲುವು" : ಮಂಗೋಲಿಯ, ಚೀನ, ಜಪಾನ್, ಕೊರಿಯ ಕಥೆಗಳ ಸಂಕಲನ; ವಿಶ್ವಕಥಾಕೋಶ ಸಂಪುಟ-4: ಪ್ರಕಾಶನ : ನವಕರ್ನಾಟಕ ಸಂಸ್ಥೆ; ಪ್ರಧಾನ ಸಂಪಾದಕ: ನಿರಂಜನ; ಅನುವಾದ : ಜಿ. ಎಸ್. ಸದಾಶಿವ; ಪುಟ : 255; ಬೆಲೆ : 10 ರೂ.]

ಮಂಗೋಲಿಯದ ಕಥೆಗಳು

ಮಹಾನಾಯಕ ಲೆನಿನ್ ತನ್ನ ದೇಶದ ವಿಶಿಷ್ಟ ಸ್ಥಿತಿಗತಿಗಳಿಗೆ ಮಾರ್ಕ್ಸ್‌ವಾದವನ್ನು ಅನ್ವಯಿಸಿದ್ದ. ಹಿಂದುಳಿದ ಕೆಲವೆಡೆ, ಬಂಡವಾಳಶಾಹಿ ಪದ್ಧತಿಯ ಹಂತವನ್ನು ಮುಟ್ಟದೆಯೇ ಪಾಳೆಯಗಾರಿಕೆಯಿಂದ ಸಮಾಜವಾದಕ್ಕೆ ನೇರವಾಗಿ ಹೋಗುವ ಕ್ರಾಂತಿ ಮಾರ್ಗವನ್ನು ಅವನು ರೂಪಿಸಿದ; ಮಾರ್ಕ್ಸ್‌ನ ಸಿದ್ಧಾಂತವನ್ನು ವಿಸ್ತರಿಸಿದ.

ಆಂತರಿಕ ಶೋಷಕರ ವಿರುದ್ಧ 1921ರಲ್ಲಿ ಸುಖೆಬಾತೊರ್‌ನ ನಾಯಕತ್ವದಲ್ಲಿ ಸಾಮ್ರಾಜ್ಯವಾದಕ್ಕೆದಿರಾಗಿ, ಭೂಮಾಲೀಕಶಾಹಿಗೆದಿರಾದ ಕ್ರಾಂತಿ ನಡೆದು ಯಶಸ್ವಿಯಾಯಿತು. ಆ ಪ್ರಯೋಗದಲ್ಲಿ ಆಸ್ಥೆವಹಿಸಿದ ಲೆನಿನ್ ಹೆಜ್ಜೆ ಹೆಜ್ಜೆಗೂ ನೆರವಾದ. 1924ರಲ್ಲಿ ಮಂಗೋಲಿಯಾದ ಜನತಾ ಗಣರಾಜ್ಯ ಸ್ಥಾಪಿತವಾಯಿತು. ಏಷ್ಯದ ಹೃದಯಸ್ಥಾನದಲ್ಲಿ ಉರಿಯತೊಡಗಿದ ಈ ಬೆಳಕು ಸೂರ್ಯನಿಗೇ ಮೂಲವೆನಿಸಿದ ಜಪಾನಿಗೆ ಸಹ್ಯವಾಗಲಿಲ್ಲ. ಅದು 1931ರಲ್ಲೂ ಮತ್ತೆ 1939ರಲ್ಲೂ ಮಂಗೋಲಿಯದ ಮೇಲೆ ದಂಡೆತ್ತಿ ಸೋಲುಂಡು ಪಾಪಸಾಯಿತು. ಇಂತಹ ಪರಿಸ್ಥಿತಿಯಲ್ಲೂ ಮಂಗೋಲಿಯಾ ಸಮಾಜವಾದದ ಸ್ಥಾಪನೆಯ ಕಾರ್ಯ ಆರಂಭಿಸಿತು.

ಓದು, ಬರಹ ಸರ್ವರ ಸೊತ್ತು. ಭಾರೀ ಪ್ರಮಾಣದ ವಿದ್ಯಾಭ್ಯಾಸಕ್ಕೂ ಉಚ್ಚ ಶಿಕ್ಷಣಕ್ಕೂ ಅನುವು ಮಾಡಿಕೊಟ್ಟಿದ್ದು ಕಮ್ಯುನಿಸ್ಟ್ ನಾಯಕತ್ವ. ಚೀನೀ, ಟಿಬೇಟ್, ಪರ್ಶಿಯನ್ ಸಾಹಿತ್ಯಗಳ ಸಂಪರ್ಕ ಅವರಿಗೆ ಲಭಿಸಿತ್ತು. ಕೊಳೆತು ನಾರುತ್ತಿದ್ದ ಸಮಾಜದಿಂದ ಹೊಸ ಸಮಾಜದೆಡೆಗೆ ಸ್ಥಿತ್ಯಂತರಗೊಳ್ಳುತ್ತಿರುವ ಸಮಾಜದಲ್ಲಿ ರೂಪುಗೊಳ್ಳುತ್ತಿರುವ ಹೊಸ ಮಾನವೀಯ ಸಂಬಂಧಗಳ ಮನೋಜ್ಞ ಚಿತ್ರಣ ಇಲ್ಲಿಯ ನಾಲ್ಕು ಕತೆಗಳಲ್ಲಿ ಸೆರೆಹಿಡಿಯಲ್ಪಟ್ಟಿದೆ. "ನಿಜವಾದ ಸೌಂದರ್ಯ ಆತ್ಮ ಸೌಂದರ್ಯ. ನಮ್ಮ ಮಕ್ಕಳು ತಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಸೌಂದರ್ಯವಂತರಾಗಿರುವಂತೆ ಕಲಿಸಲು ನಾನು, ತೋಮೋ ಪ್ರಯತ್ನಿಸುತ್ತಿದ್ದೇವೆ." ಎನ್ನುವ 'ಚೆಲುವು' ಕಥೆಯ ಕಥಾನಾಯಕ ಸುಂದರಳಾದ ಹೆಂಡತಿಗೆ ಕುರೂಪನಾದ ಗಂಡನಾಗಿದ್ದಾನೆ. ಸುಂದರಳಾದ ಹೆಂಡತಿಯು ಗಂಡ ಎದುರಿಸಬೇಕಾಗಿರುವ ಇಲ್ಲಿಯ ಪರಿಸರ ಸ್ಥಿತ್ಯಂತರಕ್ಕೊಳಪಟ್ಟುದು. ಮೊದಮೊದಲು ಹೇಡಿಯಂತಾಗುವ, ತುಂಬಾ ಚಂಚಲಗೊಳಿಸುತ್ತಿರುವ ಸಮಾಜ ಇಲ್ಲಿ ಬದಲಾವಣೆಯಾಗುತ್ತಿದ್ದೆ ಸಾಮುದಾಯಿಕ ಪ್ರಜ್ಞೆ, ಬದುಕಿಗೆ ನಿಷ್ಠೆ ಜನರಲ್ಲಿ ಬೆಳೆಯುತ್ತಿದೆ. ಕಥಾನಾಯಕನ ಸಂಯಮ, ಹೆಂಡತಿಯ ಕಮಿಟ್‌ಮೆಂಟ್ ಜನತೆಯ ಧೋರಣೆಯಲ್ಲಾಗುತ್ತಿರುವ ಬದಲಾವಣೆ, ಎಲ್ಲರಲ್ಲೂ ಹೊಸ ಬದುಕನ್ನು ರೂಪಿಸುತ್ತಿದೆ. 'ಚೆಲುವು' ತನ್ನೆಲ್ಲ ಅರ್ಥಗರ್ಭಿತತನವನ್ನು ತುಂಬಿ ಸೂಸುತ್ತಿದೆ. ಎಲ್ಲ ಕಥೆಗಳ ಚೆಲುವು ಬದಲಾವಣೆಯಾಗುತ್ತಿರುವ ಸಂದರ್ಭದಲ್ಲಿ ಮನುಷ್ಯನ ನೀತಿ ನಡುವಳಿಕೆಗಳನ್ನು ಚೆಲುವಾಗಿ ರೂಪಿಸುತ್ತಿದೆ. ಹೀಗಾಗಿ ಈ ಕಥೆಯ ಶೀರ್ಷಿಕೆಯನ್ನು ಹೊತ್ತ ಈ ಸಂಪುಟ ತುಂಬಾ ಅರ್ಥಗರ್ಭಿತವಾಗಿದೆ. ಎರಡನೇ ಕಥೆ "ಅಪ್ಪ ಯಾವಾಗ ಬರ್ತಾರೆ?" ಮನ ಕಲಕುವ ಕಥೆ. ಸಾಮ್ರಾಜ್ಯಶಾಹಿಗಳಿಗೆ ಮೀರಾಗಿ ಜನ ನಡೆಸಿದ ಹೋರಾಟ, ಗೈದತ್ಯಾಗ ಅಸಾಧಾರಣವಾದುದು. ಇಂತಹ ಒಬ್ಬ ಸೈನಿಕನ ಮರಳುವಿಕೆಯ ನಿರೀಕ್ಷಣೆಯಲ್ಲಿರುವ ತಾಯಿ, ಮಗನ ಮನೋಜ್ಞ ಚಿತ್ರಣ ಈ ಕಥೆ. ಇಂತಹ ಅಗಲಿಕೆಯ ಕಹಿಯಾದ ಕಣ್ಣೀರನ್ನು ಆ ದೇಶದ ಜನ ಸಾಕಷ್ಟು ಉಂಡಿದ್ದಾರೆ. "ಎಷ್ಟೋ ಕಾಲದಿಂದ ದುಃಖದಿಂದ ನರಳುತ್ತಿರುವ ನಮ್ಮ ಈ ಪ್ರಾಚೀನ ಮಂಗೋಲಿಯಾ ಭೂಮಿ ಇಂತಹ ಕಣ್ಣೀರಿನ ಸಾಗರಗಳಿಂದ ಎಷ್ಟು ತೊಯ್ದಿಲ್ಲ!" ಎಂದು ತುಂಬು ಹೃದಯದಿಂದ ನೆನೆಯುವ ಈ ಕಥೆಯ ಲೇಖಕ ಲವ್ ಸುರೆಂಗೀನ್ ಕೃತಜ್ಞತೆಯ ಕಣ್ಣೀರನ್ನು ನಮ್ಮಲ್ಲೂ ತುಂಬಿ ನಮ್ಮನ್ನು ಜಾಗೃತರನ್ನಾಗಿ ಮಾಡುತ್ತಾರೆ. 'ಕಣ್ಣುಗಳ' ಮೂಲಕ ಮನುಷ್ಯ ಹೃದಯದ ಚೆಲುವಿನ ಸಂಪತ್ತನ್ನು ನೋಡುವ ತುಂಬ ಸರಳವಾದ ಕಥೆ ಎಸ್. ಎರ್ದೆನೆಯವರ "ಕಣ್ಣುಗಳ" "ಪ್ರೇಮದಲ್ಲಿರುವ ಮನುಷ್ಯನಿಗೆ ತಾನು ಪ್ರೀತಿಸುವ ಹೆಣ್ಣಿನ ಸರ್ವಸ್ವವೂ ಸುಂದರ" ಎನ್ನುವ ಅಗದೀ ಸಾಮಾನ್ಯವಾದ ವಿಶ್ವ ಸತ್ಯವನ್ನು ಈ ಕತೆಯ ಮೂಲಕ ಸಾರುತ್ತಾರೆ. ಮಂಗೋಲಿಯಾದ ಮತ್ತೊಂದು ಕಥೆ 'ನಮುಂದರೀ.' ಪಾಳೆಯಗಾರೀ ಸಮಾಜ ಗಂಡಸನ್ನು ಹೊಣೆಯಿಂದ ತಪ್ಪಿಸಿಕೊಳ್ಳುವಂತೆಯೂ, ತನ್ನಿಷ್ಟದಂತೆ ಏನನ್ನಾದರೂ ಅನುಭೋಗಿಸುವ (ಹೆಣ್ಣನ್ನೂ—ಯಾಕೆಂದರೆ ಪಾಳೆಯಗಾರಿ ಸಮಾಜದಲ್ಲಿ ಹೆಣ್ಣು ಬರೀ ಉಪಭೋಗದ ವಸ್ತು) ಚಂಚಲ ಪ್ರಾಣಿಯಾಗಿ ರೂಪಿಸಿದೆ. ಆದರೆ ಇಲ್ಲಿ ಬದಲಾಗುತ್ತಿರುವ ಸಮಾಜದಲ್ಲಿ ಅವನ ಪಾಳೆಯಗಾರಿ ಪ್ರವೃತ್ತಿಯ ಕ್ರೌರ್ಯವನ್ನು ಎಲ್ಲರೂ ನಗಾಡುತ್ತಲೇ ಬದಲಾಯಿಸುವ ಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆ, ನಮುಂದರಿ (ಕಥಾನಾಯಕಿ)ಯ ಸಂಯಮವನ್ನು ಸೆರೆಹಿಡಿಯುವ ತುಂಬ ಸಮರ್ಥವಾದ ಕಥೆ. ಒಟ್ಟಿನಲ್ಲಿ ಇಲ್ಲಿಯ ನಾಲ್ಕು ಕಥೆಗಳೂ ಬದಲಾಗುತ್ತಿರುವ ಸಮಾಜದಲ್ಲಿ ಮನುಷ್ಯ ಸಂಬಂಧಗಳನ್ನು ತುಂಬಾ ಸೂಕ್ಷ್ಮವಾಗಿ ಸೆರೆಹಿಡಿದಿವೆ.

ಚೀನಾದ ಕಥೆಗಳು

ಲು ಷೂನ್ ಪ್ರಪಂಚದ ಶ್ರೇಷ್ಠ ಸಾಹಿತಿ. ಕ್ರಾಂತಿಪೂರ್ವ ಚೀನದ ದಾರುಣವಾದ ಬದುಕನ್ನು ತುಂಬಾ ಸಮರ್ಥವಾಗಿ ಸೆರೆಹಿಡಿಯುವ ಈ ಲೇಖಕ ಪ್ರಪಂಚದ ಎಲ್ಲ ಹಿಂದುಳಿದ ದೇಶಗಳ, ಹೋರಾಟದ ಹಂತದಲ್ಲಿರುವ ದೇಶಗಳಿಗೆ ತುಂಬಾ ಸಮಾನವಾಗಿ ಸ್ಪಂದಿಸುತ್ತಾನೆ. ಹೀಗಾಗಿ ನಮ್ಮ ದೇಶಕ್ಕೂ ತುಂಬಾ ರಿಲೆವೆಂಟ್ ಆದ ಸಾಹಿತಿಯಾಗುತ್ತಾನೆ. ಆತ ಹೇಳುತ್ತಾನೆ "ಆಳುವವರ್ಗ ಸಿಂಹದಂತೆ ಕ್ರೂರಿ; ಮೊಲದಂತೆ ಪುಕ್ಕಲು; ನರಿಯಂತೆ ಕುತಂತ್ರಿ."

ತನ್ನ ಜಗತ್ಪ್ರಸಿದ್ಧ ಕಥೆಯಾದ 'ಹುಚ್ಚನ ದಿನಚರಿ'ಯಲ್ಲಿ ಮನುಷ್ಯ ಮನುಷ್ಯರನ್ನು ಶತಮಾನಗಳಿಂದ ತಿನ್ನುತ್ತ ಬಂದ ನರಭಕ್ಷಕ ಸಮಾಜವನ್ನು ತನ್ನ ವಿಡಂಬನೆಯ ಕತ್ತಿಯಿಂದ ಇರಿಯುತ್ತಾನೆ. ಇಲ್ಲಿ ಎಲ್ಲರೂ ನರಭಕ್ಷಕರು. ಇದಕ್ಕೆ ಭದ್ರವಾದ ಸಾಂಪ್ರದಾಯಿಕ ಕವಚ ಬೇರೆ. ಸಾಂಪ್ರದಾಯಿಕ ಕ್ರೌರ್ಯ ತನ್ನ ನಾಲಿಗೆ ಚಾಚಿರುವುದನ್ನು ಇಲ್ಲಿ ಸ್ವಲ್ಪ ನೋಡಿ :

"ಅದು ಯಾವಾಗಲೂ ಹಾಗೇ ಇತ್ತು..." ಎಂದ ನನ್ನನ್ನೇ ನೋಡುತ್ತ "ಅದು ಯಾವಾಗಲೂ ಹಾಗೇ ಇದೆ ಅನ್ನೋ ಕಾರಣದಿಂದ ಅದು ಸರಿ ಎನಿಸುತ್ತಿದೆಯಾ".

"ಇಂಥ ವಿಷಯಗಳನ್ನು ನಾನು ನಿನ್ನೊಡನೆ ಚರ್ಚಿಸಲು ಸಿದ್ಧನಿಲ್ಲ. ಅದೇನೇ ಇರಲಿ. ನೀನು ಆ ಬಗ್ಗೆ ಮಾತನಾಡಕೂಡದು. ಆ ವಿಷಯ ಯಾರೇ ಮಾತನಾಡಲಿ ಅದು ತಪ್ಪು".

ಕಳೆದ ನಾಲ್ಕು ಸಾವಿರ ವರ್ಷಗಳಿಂದಲೂ ನರಮಾಂಸವನ್ನು ಎಲ್ಲಿ ತಿನ್ನುತ್ತಾ ಬಂದಿದ್ದಾರೋ ಅದೇ ಸ್ಥಳದಲ್ಲಿ ಇಷ್ಟು ವರ್ಷಗಳಿಂದಲೂ ನಾನು ಜೀವಿಸುತ್ತಾ ಬಂದಿದ್ದೇನೆಂದು ಈಗ ನನಗೆ ಅರಿವಾಗಿದೆ.

ಬಹುಶಃ ಮನುಷ್ಯರನ್ನು ತಿನ್ನದ ಮಕ್ಕಳು ಇನ್ನೂ ಇದ್ದಾರೆ. ಆ ಮಕ್ಕಳನ್ನು ರಕ್ಷಿಸಿ...

ಪ್ರಪಂಚದ ಕಥಾ ಸಾಹಿತ್ಯಕ್ಕೊಂದು ಅಮೂಲ್ಯವಾದ ಕಾಣಿಕೆ ಈ ಕಥೆ. ಇಷ್ಟು ಪರಿಣಾಮಕಾರಿಯಾಗಿ ಕಥೆ ಹೇಳಬಲ್ಲ ಕಲಾವಿದ ಹೇಳುತ್ತಾನೆ: "ಬದುಕಲು ಇಚ್ಛಿಸುವ ಜನರು ಈ ಜಗತ್ತಿನಲ್ಲಿ ಇನ್ನೂ ಇರುವರೆಂದಾದರೆ, ಮಾತನಾಡಲು, ನಗಲು, ಅಳಲು, ಕೂಗಾಡಲು ಅವರು ಎದೆಗಾರಿಕೆ ತೋರಬೇಕು; ಈ ಶಾಪಗ್ರಸ್ತ ಸ್ಥಳದಲ್ಲಿ ಈ ಶಾಪಗ್ರಸ್ತ ಯುಗಕ್ಕೆದಿರು ಬಂಡಾಯವೆದ್ದು ಹೋರಾಡಿ ಅದನ್ನು ಸೋಲಿಸಬೇಕು."

ಕ್ರಾಂತಿಯ ತೀವ್ರತೆ ಹೆಚ್ಚಾಗುತ್ತಿರುವ ನಂತರದ ಪೀಳಿಗೆ ಮೊದಲಿನ ಪೀಳಿಗೆಗಿಂತ ತೋರುವ ಅಪಾರ ಧೈರ್ಯವನ್ನು ಸೆರೆಹಿಡಿಯಬಲ್ಲ ಕಥೆ ಮಾವೋ ತುನ್‌ರ "ಎರಡನೇ ಪೀಳಿಗೆ" ಪರಿಸರದ ಪ್ರಭಾವದಿಂದ ಮನುಷ್ಯರಿಗೆ ಬರುವ ಸ್ಥೈರ್ಯವನ್ನು ಹೇಳುತ್ತದೆ. ತಂದೆ ಮಕ್ಕಳ ಸಂಬಂಧದ ಮಾರ್ಮಿಕ ನಿರೂಪಣೆ. "ಪ್ರೇಮಕ್ಕೆ ಸ್ಥಾನ" ದೀರ್ಘವಾದ ಕಥೆ. 'ನಾಲ್ವರ ಕೂಟ' ಮನುಷ್ಯ ಸಂಬಂಧಗಳನ್ನು, ಪ್ರೀತಿಪ್ರೇಮಗಳನ್ನು ಅಪಮಾರ್ಗಕ್ಕೆಳೆಯುತ್ತಿರುವುದು ಒಂದು ಕಡೆಯಾದರೆ; ಪ್ರೇಮದ ಸ್ಥಾನವನ್ನು ಹಣ, ಅಧಿಕಾರಗಳಿಂದ (ಪಾಳೆಯಗಾರಿ ಕೊಡುಗೆ) ನಿಯಂತ್ರಿಸಲ್ಪಡುತ್ತಿರುವ ಹಳೆ ಸಂಬಂಧಗಳಿಂದ ಸೀಳಿಕೊಂಡು ಇಲ್ಲಿ ಮನುಷ್ಯ ಸಂಬಂಧ ಹೊಸ ರೂಪ ಪಡೆಯುತ್ತದೆ. ಹಿರಿಯ ಸಂಗಾತಿ ಕಿರಿಯ ಸಂಗಾತಿಗೆ ಹೇಳುತ್ತಿರುವ ಈ ಮಾತುಗಳು ಉಲ್ಲೇಖಾರ್ಹ: "ಪ್ರೇಮ ತುಂಬಾ ಸಂಕೀರ್ಣವಾದದ್ದು. ಅದು ಒಂದು ಸಮಾನ ಧ್ಯೇಯ, ಹಿತಾಸಕ್ತಿಗಳ ಮೇಲೆ ನಿಲ್ಲಬೇಕು. ಅದು ಎಲ್ಲ ಪರೀಕ್ಷೆಗಳನ್ನೂ ಎದುರಿಸಬೇಕು. ಕಾಲಕಳೆದಂತೆ ಅದು ಗಟ್ಟಿಯಾಗುತ್ತಾ ಹೋಗಬೇಕು. ವೈಯುಕ್ತಿಕ ಗುಣಾವಗುಣಗಳು, ರೂಪ ಮತ್ತು ನಡವಳಿಕೆ ಎಲ್ಲವೂ ಮುಖ್ಯ ನಿಜ. ಆದರೆ ಎಲ್ಲಕ್ಕೂ ಮಿಗಿಲಾದ ಎತ್ತರದಲ್ಲಿ ಪ್ರೇಮವನ್ನು ಇರಿಸಬಾರದು. ಅದು ನೀನು ಕ್ರಾಂತಿಯನ್ನು ಮರೆಯುವಂತೆ ಮಾಡಿದರೆ, ನಿನ್ನ ಜೀವನದಲ್ಲಿ ಅದಕ್ಕೆ ಒಂದು ತಪ್ಪು ಸ್ಥಾನ ಕೊಟ್ಟಂತೆ. ಇನ್ನೂ ಉತ್ತಮವಾಗಿ ಕೆಲಸಮಾಡಲು ಅದು ಪ್ರೋತ್ಸಾಹಿಸುವಂತಿದ್ದರೆ, ಅದು ಸರಿಯಾದ ಸ್ಥಾನದಲ್ಲಿದೆ ಎಂದು ಅರ್ಥ. ಆಗ ಮಾತ್ರ ನಿಜವಾದ ಸಂತೋಷದ ಅನುಭವವಾಗುತ್ತದೆ. ಕ್ರಾಂತಿಕಾರಿಯ ಜೀವನದಲ್ಲಿ ಪ್ರೇಮಕ್ಕೆ ತುಂಬಾ ಮಹತ್ವದ ಸ್ಥಾನವಿದೆ".

"ಇಬ್ಬರು ದಳನಾಯಕರು" ತುಂಬಾ ಲವಲವಿಕೆಯ ಹಾಸ್ಯಕತೆ. ಯಾರಿಗೂ ನಿಷ್ಠುರನಾಗಬಾರದೆನ್ನುವುದೇ ತುಂಬಾ ನಾಜೂಕಿನ ನರಿಯ ತಂತ್ರ. ಇಂತಹ ಒಬ್ಬ ನಾಯಕನನ್ನು ಲೇವಡಿಮಾಡುತ್ತಲೇ ಸಮೂಹದ ಹಿತಕ್ಕೆ ವೈಯುಕ್ತಿಕವಾಗಿ ನಿಷ್ಠುರನಾಗುವ ನಾಯಕನ ಮಹತ್ವವನ್ನು ಸಾರುತ್ತ ಅಂತಹ ನಾಯಕರ ಅವಶ್ಯಕತೆಯನ್ನು ಒತ್ತಿ ಹೇಳುವ ಕಥೆ. ಇಂತಹ ನಿಷ್ಠುರ ನಾಯಕನೂ ಕೂಡ ಬದಲಾದ ಜನರ ಮನೋಧರ್ಮದಲ್ಲಿ ಸ್ವೀಕೃತನೂ, ಯೋಗ್ಯನೂ, ಆದರದ ನಾಯಕನಾಗಬಲ್ಲ. ಕರ್ತವ್ಯದ ಪ್ರಜ್ಞೆಯಲ್ಲಿ ಹೊಸ ಸಮಾಜದ ಜನರು ತೋರುವ ನಿಷ್ಠೆಯನ್ನು ದಾಖಲೆಗೊಳಿಸುವ ಕಥೆ "ಕಿರುಕಳದ ಒಡ್ಡು" ದುಡಿಯುವ ಜನತೆ ಅಧಿಕಾರದಲ್ಲಿರುವ ಸಮಾಜದ ಇಂತಹ ಕಥೆಗಳನ್ನು ಓದುವಲ್ಲಿ ಮನಸ್ಸು ಮುದುಗೊಳ್ಳುತ್ತದೆ. ಹೃದಯ ವೈಶಾಲ್ಯವಾಗುತ್ತದೆ. ಅಂತಹ ನಾಡು ಕಟ್ಟಲು ಮುಂದಾಗಲು ಪ್ರೇರೇಪಿಸುತ್ತದೆ. ಕ್ರಾಂತಿಪೂರ್ವ, ಕ್ರಾಂತಿ, ಕ್ರಾಂತಿನಂತರದ ಪ್ರಾತಿನಿಧಿಕ ಜೀವನವನ್ನು ಇಲ್ಲಿಯ ಐದು ಕಥೆಗಳಲ್ಲೇ ಕೊಡಲು ಸಾಧ್ಯವಾಗದಿದ್ದರೂ ಕೂಡ ಚೀನಾ ಜನಜೀವನವನ್ನು ಇನ್ನೂ ಆಳವಾಗಿ ತಿಳಿಯಲು ಸಹಾಯವಾಗುತ್ತವೆ.

ಜಪಾನದ ಕಥೆಗಳು

ಜಪಾನಿನ ಎರಡು ಕಥೆಗಳನ್ನು ಈ ಸಂಕಲನ ಹೊಂದಿದೆ. ಜಪಾನಿನ ಸಮಕಾಲೀನ ಜೀವನವನ್ನು ಈ ಕಥೆಗಳು ಕಟ್ಟಿ ಕೊಡುತ್ತವೆ.

ಜಪಾನಿನಲ್ಲಿ 1971ರಲ್ಲೇ ಭೂಮಾಲೀಕ ಪದ್ಧತಿ ನಿರ್ನಾಮವಾಗಿತ್ತು. ಶೇಕಡಾ 97 ಜನರಿಗೆ ಅಕ್ಷರ ಜ್ಞಾನ, ವಿದ್ಯೆ. ಇವರು ಸಿದ್ಧ ಕಾರ್ಮಿಕರು, ತಂತ್ರ ಜ್ಞಾನದಲ್ಲಿ ಕುಶಲರು. ವೇತನ ಬೇರೆ ದೇಶಗಳಲ್ಲಿ ದೊರೆಯುವುದರ ಮೂರರಲ್ಲಿ ಒಂದು ಪಾಲು, ಉದ್ಯಮ ಗುಡಿ ಕೈಗಾರಿಕೆ ಎನಿಸುವಷ್ಟು ವಿಕೇಂದ್ರೀಕರಣ. ಮತ್ತಷ್ಟು ಕಮ್ಮಿ ಪಗಾರ. ಹಗಲೂ ಇರುಳೂ ಪಾಳಿಗಳಲ್ಲಿ ದುಡಿಮೆ. ಕೈಗಾರಿಕಾ ವಲಯದಲ್ಲಿ ಎರಡನೆಯ ಸ್ಥಾನ ಜಪಾನಿಗೆ - ಬಂಡವಾಳಶಾಹೀ ಜಗತ್ತಿನಲ್ಲಿ.

ಇಂತಹ ರಾಷ್ಟ್ರದ ಎರಡು ಕಥೆಗಳು ಇಲ್ಲಿವೆ. ಸಿರಿವಂತ ಕುಟುಂಬದ ಜೀವನ ದ್ವಂದ್ವಗಳನ್ನು ಹೇಳುವ ಕಥೆ 'ಹಡಗು ಕಟ್ಟೆ'.

ಸಮಕಾಲೀನ ಜೀವನವನ್ನು ಸಮರ್ಥವಾಗಿ ಸೆರೆ ಹಿಡಿದಿರುವ ಕಥೆ "ಮಣ್ಣಿನ ಬೊಂಬೆ" ಭಾವೋದ್ರೇಕ ಕೈಡೆಯಿಲ್ಲ. ಸರಳೀಕರಿಸಿದ ತೀರ್ಮಾನಗಳಿಲ್ಲ. ದೇಶದ ಪರಿಸ್ಥಿತಿ ಮಧ್ಯಮ ವರ್ಗದ ಮೇಲೆ ಬೀರುವ ಪ್ರಭಾವ ಇದರಿಂದ ಆ ಕುಟುಂಬದಲ್ಲಿ ಮುರುಟಿಕೊಳ್ಳುವ ಸಂಬಂಧಗಳನ್ನು ಯಥಾವತ್ತಾಗಿ ದಾಖಲೆಗೊಳಿಸಿವೆ, ಸಂಯಮದ ನಿರೂಪಣೆ. ಆರ್ಥಿಕ ಸ್ವತಂತ್ರ ಹೊಂದಿರುವ ಗಂಡಸು ತನ್ನದು ಮಾತ್ರ ದುಡಿಮೆ - ಅಡಿಗೆ ಮಾಡುವ ಕಸ, ಮುಸುರೆ ತೊಳೆಯುವ ದುಡಿಮೆ ಗಣನೆಗೇ ಇಲ್ಲದ್ದು ಎಂದು ತಿಳಿಯುತ್ತಾನೆ. ಇಲ್ಲಿಯ ಕಥಾ ನಾಯಕಿ ತೋಶಿಕೊ ದುರ್ಬಲಳಾದ, ಅಸಹಾಯಕ ಹೆಣ್ಣು, ಸದಾ ಕತ್ತೆಯಂತೆ ದುಡಿಯುವ ಕುರೂಪಿ ಹೆಣ್ಣು. ಇವಳಲ್ಲಿ ಯಾವ ಭಾವನೆಗಳೂ ಮೊಳೆತಿಲ್ಲ. ಗಟ್ಟಿಮುಟ್ಟಾಗಿರುವ ಮಾನವರು (ಗಂಡ

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

—ಎನ್ಕೆ

ಸುಳ್ಳು ಹೇಳುವವರ ನಾಲಿಗೆ ಕತ್ತರಿಸಬೇಕೆ?

ಕಳವು ಮಾಡಿದವರ ಕೈ ಕತ್ತರಿಸುವ, ವ್ಯಭಿಚಾರ ಮಾಡಿದವರನ್ನು ಬಹಿರಂಗವಾಗಿಯೇ ಕಲ್ಲು ಒಗೆದು ಕೊಲ್ಲುವ ಶಿಕ್ಷೆ ಪಾಕಿಸ್ತಾನದ ಮಿಲಿಟರಿ ಆಡಳಿತೆ ಜಾರಿಯಲ್ಲಿ ತಂದಿದೆ. ಇದು ಮುಸ್ಲಿಂ ಧರ್ಮದ ಅನುಕರಣೆಯಂತೆ. ಆಧುನಿಕ ಯುಗದಲ್ಲಿ ಈ ತರಹದ ಶಿಕ್ಷೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ವಿರೋಧಿಸುತ್ತದೆ. ಬಂಡವಾಳಶಾಹಿ ಸಮಾಜದ ಆರ್ಥಿಕ-ಸಾಮಾಜಿಕ ಪದ್ಧತಿ-ರಚನೆ ಇಂಥ ಗುನ್ಹೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಇಂಥ ಅಪರಾಧಗಳ ನಿವಾರಣೆಗೆ ಬಂಡವಾಳಶಾಹಿ ಕೊನೆಗೊಂಡು ಸಮತಾವಾದಿ ಸಮಾಜ ಅಸ್ತಿತ್ವದಲ್ಲಿ ಬರುವುದು ಅತ್ಯಗತ್ಯ.

ಪಾಕಿಸ್ತಾನದ ಮಿಲಿಟರಿ ಆಡಳಿತೆಯಲ್ಲಿ ಶಿಕ್ಷೆಕೊಡುವ ಪದ್ಧತಿ ಹಿಂದುಸ್ತಾನದಲ್ಲಿಲ್ಲ. ಆದ್ದರಿಂದ ನಮ್ಮಲ್ಲಿ ಬೇಕಾದವರು ಜನರೂ-ಆಳುವವರೂ ಬೇಕಾದ ಗುನ್ಹೆ ಮಾಡಬಹುದು, ಮಾಡುತ್ತಿದ್ದಾರೆ. ಇದಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿ ಅಪವಾದವಲ್ಲ.

ಕಾಸರಗೋಡು ತಾಲ್ಲೂಕಿನ ಯುದನೀರು ಮಠದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಗುಂಡೂರಾಯರು ಅಪ್ಪಟ ಸುಳ್ಳು ಮಾತಾಡಿದ್ದಾರೆ. "ಪುರಸಭೆ, ನಗರ ಸಭೆಗಳಿಗೆ ಚುನಾವಣೆ ನಡೆಸುವುದಾಗಿ ಸರಕಾರ ಎಂದೂ ವಾಗ್ದಾನ ನೀಡಿರಲಿಲ್ಲ". ಹೋದ ವರ್ಷದ ಹಾಗೂ ಈ ವರ್ಷದ ವಿಧಾನಸಭೆಯ ವರದಿಯನ್ನು ತೆಗೆದು ನೋಡಿದರೆ ಪೌರಾಡಳಿತ ಸಚಿವ ಧರ್ಮಸಿಂಗ್ ಅವರು ಡಿಸೆಂಬರ್ ಕೊನೆಯೊಳಗಾಗಿ ಚುನಾವಣೆ ನಡೆಸಲಾಗುವುದೆಂಬ ವಾಗ್ದಾನವನ್ನು ಓದಲು ಸಾಧ್ಯ. ಹೋದ ತಿಂಗಳು ವಿರೋಧ ಪಕ್ಷದ ಪ್ರತಿನಿಧಿಗಳ ಜೊತೆ ಮಾತಾಡುತ್ತ 1982ರ ಪ್ರಾರಂಭದಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಸಂಭವವಿರುವುದರಿಂದ ಅನಂತರದ 8 ತಿಂಗಳಲ್ಲಿ ಕಾರ್ಪೊರೇಶನ್ ಚುನಾವಣೆ ನಡೆಸಲಾಗುವುದೆಂದು ಹೇಳಿದ್ದರು. ಕೆಲವೇ ದಿವಸದಲ್ಲಿ ರಾಯರ ನಾಲಿಗೆ ದಪ್ಪವಾಗಿದೆ. 1983ರ ರಾಜ್ಯದ ಮಹಾಚುನಾವಣೆ ನಡೆಯುವ ಮುನ್ನ ನಗರಸಭೆ, ಪುರಸಭೆಗಳಿಗೆ ಚುನಾವಣೆಗಳಿಲ್ಲೆಂದು ಸ್ಪಷ್ಟ ನುಡಿದಿದ್ದಾರೆ. ತಿಂಗಳಿಗೊಮ್ಮೆ ಸುಳ್ಳು ಹೇಳುವ ಈ ಜನರ ನಾಲಿಗೆ ಕತ್ತರಿಸಬೇಕೋ ಅಥವಾ ಇವರ ಮುಂದಿನ ತಾಳತಪ್ಪಿದೆನ್ನಬೇಕೋ? ಜನರೇ ನಿರ್ಧರಿಸಲಿ.

ರಾಜ್ಯದ ಜನರ ನಾಗರಿಕ ಹಕ್ಕು, ಪ್ರಜಾಪ್ರಭುತ್ವದ ಬೆಲೆಗಳೆಲ್ಲ ಏಕ ವ್ಯಕ್ತಿಯ ಅಭಿಪ್ರಾಯದಂತೆ ನಡೆಯಬೇಕೇ? ಇಷ್ಟು ದಿವಸ ಇಂದಿರಾ ಗಾಂಧಿಯ ಸರ್ವಾಧಿಕಾರದ ರುಚಿಯನ್ನಷ್ಟೇ ಕಂಡಿದ್ದೇವೆ. ಈಗ ಗುಂಡೂರಾಯರ ಪ್ರಜಾಪ್ರಭುತ್ವ ವಿರೋಧಿ ಗುಂಡಿಗೂ ನಾವು ಸುಮ್ಮನಿರಬೇಕೇ? ವಿಧಾನಸಭೆ ಸದಸ್ಯರೂ, ಮಂತ್ರಿಗಳೂ ಗುಂಡೂರಾಯರ ಗುಂಡಿಗಂಜಿ ಗುಂಡಿ ಸೇರುವಾಗ ಸಂಘಟಿತ ಜನತೆ, ಕಾರ್ಮಿಕ, ಯುವ ಜನತೆ ಗರ್ಭಗುಂಡಿ ಸೇರಬೇಕೇ, ಅಥವಾ ಗುಂಡಿಗೆ ಗುಂಡೆಸೆಯಲು ಮುಂದೆ ಬಂದು ಪ್ರಜಾಪ್ರಭುತ್ವ-ನಾಗರಿಕ ಹಕ್ಕು ರಕ್ಷಿಸಬೇಕೇ? ಗುಂಡೂರಾಯರು ಸವಾಲೊಡ್ಡಿದ್ದಾರೆ. ಜನತೆ ಅದನ್ನು ಸ್ವೀಕರಿಸಿ ಯುದ್ಧಕ್ಕೆ ಸಿದ್ಧರಾಗುತ್ತಾರೆಯೇ ನೋಡೋಣ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮೂರ್ತಿಯವರ ಅರ್ಭಟ

ಭ್ರಷ್ಟಾಚಾರದ ಕೊಂಪೆ, ಅಕ್ರಮಗಳ ಸಂತೆ, ಸಬೂಬಿನ ಕಂತೆ-ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಕೆ. ಕೆ. ಮೂರ್ತಿಯವರ ಅರ್ಭಟ. ಪ್ರಾಧಿಕಾರದ ಆಡಳಿತೆಯ ನೈಜ ಚಿತ್ರದ ವರ್ಣನೆ.

ಮಂಜೂರಾದ ಕಡೆ ಮನೆಗಳೇ ಇಲ್ಲವಂತೆ. ಹತ್ತು ಮಂದಿಗೆ ಒಂದೇ ನಿವೇಶನದ ಮಂಜೂರಿಯಂತೆ. ಅನಧಿಕೃತ ಮನೆಗಳು ಕಣ್ಣೆದುರಿಗೇ ಎದ್ದರೂ ಏನೊಂದೂ ಕ್ರಮವೇ ಇಲ್ಲವಂತೆ. ಖದೀಮ ನೌಕರರು ಪುಢಾರಿಗಳ ಹಾವಳಿಯಂತೆ ತಮ್ಮ ಕಚೇರಿಗೆ ಬರುವವರಿಗೆಲ್ಲ ತಲೆ ಬೋಳಿಸಿ ತಿರುಪತಿ ವೆಂಕಟರಮಣನ ದರ್ಶನದ ಗತಿಯನ್ನೇ ತಂದೊಡ್ಡುತ್ತಾರಂತೆ. ಗುಮಾಸ್ತೆಯರೆಲ್ಲ ರೂ. 30ಲಕ್ಷ ಆಸ್ತಿ ಮಾಡಿದ್ದಾರಂತೆ! ಪ್ರದರ್ಶನದಲ್ಲಿ ಪ್ರಥಮ ಬಕ್ಷೀಸ್ ಪಡೆಯುವ ವರ್ಣಚಿತ್ರ.

ಹಾಡಿದ್ದೇ ಹಾಡುವ ಕಿಸಿಬಾಯಿ ದಾಸರಿವರಲ್ಲ. "ಹಿಂದಿನದ್ದೆಲ್ಲ ಕೊಳಪೆ, ನಾವೇ ಸರಿಪಡಿಸುವವರು, ಕೊಳಪೆ ನಿರ್ಮೂಲ ಮಾಡುವವರು". ಹೊಸದಾಗಿ ಅಧಿಕಾರಕ್ಕೆ ಬಂದವರೆಲ್ಲ ತಮ್ಮ ಹಿಂದಿನ ಅಧಿಕಾರಿ, ಆಡಳಿತೆಯ ಕುರಿತು ಹಾಡುವ ಹಾಡುಗಳೆಲ್ಲ ಒಂದೇ ಆಲಾಪಕ್ಕೆ ಸೇರಿದವು. ಇಂದಿರಾಗಾಂಧಿ ಜನತಾ ಆಡಳಿತೆಯನ್ನೂ, ಗುಂಡೂರಾಯರು ದೇವರಾಜ ಅರಸು ಆಳ್ವಿಕೆಯನ್ನೂ ಈಗಿರುವ ಸಂಕಷ್ಟ, ಭ್ರಷ್ಟಾಚಾರಗಳಿಗೆಲ್ಲ ಹೊಣೆಗಾರರನ್ನಾಗಿ ಮಾಡಿರುವಾಗ, ಮರಿ ಮೂರ್ತಿಯವರ ಪಾಡೇನು.

ನಿಜಲಿಂಗಪ್ಪನವರ ಕಾಲದಿಂದಲೂ ಚಲನ ಚಿತ್ರ, ನಟಿ-ನಟಿಯರ ವಿತರಣೆ ಕಾರ್ಯದಲ್ಲೇ ವ್ಯವಹಾರ ನಡೆಸುತ್ತಿದ್ದ ಮೂರ್ತಿಯವರು ಗುಂಡೂರಾಯರನ್ನೂ "ಬಲೆಯಲ್ಲಿ" ಹಾಕಿಕೊಂಡಿದ್ದಾರೆ. ಆಶ್ಚರ್ಯಪಡಬೇಕಾಗಿಲ್ಲ. ತಮ್ಮ ಮನೆ ಅಂಗಳವನ್ನು ಕೂಡ ಮಿಂಚುವ ಸಂಗಮರೀ ಕಲ್ಲಿನಿಂದ ಅಲಂಕರಿಸಿಕೊಂಡಿರುವ ಮೂರ್ತಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆಯ ಜವಾಬ್ದಾರಿ ಹೊತ್ತು ಬೆಂಗಳೂರು ನಗರವೇ ಮಿಂಚುವಂತೆ ಮಾಡಬಹುದಲ್ಲ. ಈಗಿರುವ ಮಂತ್ರಿಮಂಡಲದ 82 ಮಾರ್ಚಿನಲ್ಲೋ 83 ಏಪ್ರಿಲ್‌ನಲ್ಲೋ ಕೊನೆ ಉಸಿರೆಳೆದ ನಂತರ ಮೂರ್ತಿಯವರಿಗೂ ಮನೆಗಪ್ಪಣೆ ಬಂದನಂತರ ಬರುವ ಹೊಸ ಅಧ್ಯಕ್ಷರೂ ಮೂರ್ತಿಯವರಂತೆಯೇ ಗೀಗೀ ಹಾಡುತ್ತಾರೆಂಬುದನ್ನು ಈ ಮಹಾಶಯರು ನೆನಪಿಟ್ಟುಕೊಂಡರೊಳಿತು.

ಅದು ಬಿಡಿಎ ಆಗಬಹುದು. ಹೌಸಿಂಗ್ ಬೋರ್ಡ್ ಇರಬಹುದು ಕೊಳಚೆ ನಿರ್ಮೂಲನ ಖಾದಿ-ಗ್ರಾಮೋದ್ಯೋಗ ಕಾರ್ಪೊರೇಶನ್‌ಗಳಿರಬಹುದು-ಕಾಂಗ್ರೆಸ್ಸಿನ ಕೊಳಚೆಯಲ್ಲೇ ಹುಟ್ಟಿಬೆಳೆಯುತ್ತಿರುವುದರಿಂದ ಇವುಗಳನ್ನೆಲ್ಲ ಆಳವಾದ ರಾಡಿಯಿಂದ ಎಬ್ಬಿಸಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡ ಮತ್ತು ಪ್ರಜಾಪ್ರಭುತ್ವ ರಂಗ ಬಲವಾಗಿ ಬೆಳೆಯಬೇಕು, ರೈತ-ಕಾರ್ಮಿಕರ, ಸಾರ್ವಜನಿಕರ ಸಂಘಟಿತ ತೀವ್ರ ಹೋರಾಟ ನಡೆಯಬೇಕು. ಸೂಳೆಯ ಪಾಪ ಸನ್ಯಾಸಿಗೆ ತಟ್ಟುವಂತೆ ಬಂಡವಾಳಶಾಹಿ ಆಡಳಿತೆಯಲ್ಲಿ ಮಂತ್ರಿಗಳ ಒತ್ತಡ, ರಾಜಕಾರಣಿಗಳ ಪ್ರಭಾವ, ಹಣದ ಆಕರ್ಷಣೆಗಳಿಂದ ಯಾವ ಮಂಡಳಿಯನ್ನಾಗಲೀ, ಕಾರ್ಪೊರೇಶನ್‌ಗಳನ್ನಾಗಲೀ, ಬಿಡುಗಡೆ ಮಾಡಲು ಸಾಧ್ಯವಿಲ್ಲೆಂಬುದನ್ನು ಮೂರ್ತಿಯವರು ತಿಳಿದುಕೊಂಡರೊಳಿತಲ್ಲವೇ.

ಎರಡು ದಿನಕ್ಕೊಂದು ಕೈಗಾರಿಕೆ

ಕೈಗಾರಿಕೋದ್ಯಮಿಗಳು, ನಿರುದ್ಯೋಗಿ ಪದವೀಧರರು, ಉದ್ಯೋಗವಿಲ್ಲದ ಬೀದಿಬೀದಿ ಹಲೆ ಹಲೆದಾಡುವವರಿಗೆಲ್ಲ ನವೆಂಬರ್ 22ರಿಂದ ನಿದ್ದೆಯೇ ಬರುತ್ತಿಲ್ಲವಂತೆ. ಯಾಕೆ ಕೇಳಿದಿರಾ. ಪ್ರತಿ ತಾಲ್ಲೂಕಿನಲ್ಲಿ ಎರಡು ದಿನಗಳಿಗೆ ಒಂದರಂತೆ ಅಂದರೆ ಪ್ರತಿ ತಿಂಗಳು 15ರಂತೆ ಕೈಗಾರಿಕೆಯನ್ನು ಸ್ಥಾಪಿಸುವ ಗುರಿಯೊಂದಿಗೆ ಡಿಸೆಂಬರ್ ತಿಂಗಳ ಮೊದಲವಾರದಲ್ಲಿ ಪ್ರಚಾರ ಕಾರ್ಯ ಪ್ರಾರಂಭಿಸುವ ನಿರ್ಧಾರವನ್ನು ಅರ್ಥ ಸಚಿವ ವೀರಪ್ಪ ಮೊಯಿಲಿಯವರು ಪ್ರಕಟಿಸಿದ್ದಾರೆ. ಆನಂದವೇ ಆನಂದ. ಕೈಗಾರಿಕೆ ಸ್ಥಾಪಿಸುತ್ತೇನೆ, ಉತ್ಪಾದನೆ ಮಾಡುತ್ತೇನೆ, ಲಾಭ ಗಳಿಸುತ್ತೇನೆ, ಹಾದುವೆಯಾಗಿ ಸುಂದರ ಜೀವನ ನಡೆಸುತ್ತೇನೆಂಬ ಕನಸು ನಿರುದ್ಯೋಗಿ ಪದವೀಧರರಲ್ಲಿ ಹಾಗೆಯೇ ಕೆಲವರಿಗಾದರೂ ಉದ್ಯೋಗವಿಲ್ಲದವರಿಗೆ ಉತ್ಪಾದನೆ ಹೆಚ್ಚಿ ಬೆಲೆ ಇಳಿಯಬಹುದಲ್ಲಾ ಎಂಬ ಆಸೆ ನಾಗರಿಕರಿಗೆ.

ನಿಜವಾಗಿಯೂ ಉದ್ಯೋಗ ನಡೆಸಿಕೊಂಡು ಹೋಗಬೇಕೆಂದು ಸಾವಿರಾರು ಜನರ ಅರ್ಜಿ ಸರಕಾರದ ಕಪಾಟು ತುಂಬಿರುವ ಸಂಗತಿ ಆರ್ಥಿಕ ಮಂತ್ರಿಯವರಿಗೆ ಗೊತ್ತಿರಲಿಕ್ಕಿಲ್ಲ. ಅದು ಕೈಗಾರಿಕಾ ಮಂತ್ರಿಯವರ ಖಾತೆಯಲ್ಲವೇ? ಅವುಗಳನ್ನು ಪರಿಶೀಲಿಸಲಿಕ್ಕೆ ತೊಂದರೆ ಬಹಳ. ರಾಜಕೀಯ ನಿಷ್ಠೆಯ ಸರ್ಟಿಫಿಕೇಟ್, ದಕ್ಷಿಣೆ-ಮಾಮೂಲಗಳು, ಕೊಡುವ ಹಣವನ್ನು, ಕಚ್ಚಾ ಮಾಲುಗಳನ್ನು "ನುಂಗು"ವ ಭರವಸೆ-ಇವುಗಳಿಲ್ಲದೆ ಪರಿಶೀಲನೆ ಹೇಗೆ ಸಾಧ್ಯ ನೀವೆ ಹೇಳಿ ನೋಡುವ. ಬಿಜಾಪುರ ಒಂದೇ ಜಿಲ್ಲೆಯಲ್ಲಿ ನನಗೆ ತಿಳಿದಂತೆ 300ಕ್ಕೂ ಹೆಚ್ಚು ಅರ್ಜಿಗಳು ಕಳೆದ 5 ವರ್ಷಗಳಿಂದ ಪರಿಶೀಲನೆಯಾಗದೆ ಉಳಿದಿದೆ. ರೋಗಿಗಳಿಗೆ ಬೇಕಾದ ಗ್ಲೂಕೋಸ್ ವಾಟರ ಆಸ್ಪತ್ರೆಗಳಲ್ಲಿ ದೊರೆಯುತ್ತಿಲ್ಲ. ಬಿಜಾಪುರದಲ್ಲಿ ಇದರ ಉತ್ಪಾದನೆ ಮಾಡಲು ನಿರುದ್ಯೋಗಿ ಪದವೀಧರರ ಕಳೆದ 4-5 ವರ್ಷಗಳಿಂದಲೂ ಪಡುತ್ತಿರುವ ಕಷ್ಟ ಹೋರಾಟ ತೀರದು. ಕಾಂಗ್ರೆಸ್ ಮಂತ್ರಿಗಳು ಕೇಳುವ ಯಾವ "ಗುಣಗಳು" ಇವನಿಗೆ ಸಂಬಂಧವಿಲ್ಲ ಕಾರಣ ರೋಗಿಗಳು ಗ್ಲೂಕೋಸ್ ವಾಟರಿಲ್ಲದೆ ಸತ್ತರೂ ಚಿಂತೆಯಿಲ್ಲ, ಅದನ್ನು ತಯಾರಿಸುವ ಕಾರ್ಖಾನೆಗೆ "ಅಪ್ಪಣೆ" ದೊರಕಿಲ್ಲ. ಇದು ಕಾಂಗ್ರೆ ಆಳ್ವಿಕೆಯ ವೈಖರಿ.

ಡಿಸೆಂಬರ್ ತಿಂಗಳಲ್ಲಿ ಕಾಲಿಡುತ್ತಿದ್ದೇವೆ. ವೀರಪ್ಪ ಮೊಯಿಲಿಯವರ ಗಣಿತದ ಲೆಕ್ಕ ಇಡೋಣ. ಗುಂಡೂರಾಯರ ಬಲಗೈ ವೀರಪ್ಪ ಮೊಯಿಲಿ. ಗುಂಡೂರಾಯರ ಗುಂಡುಗಳೆಲ್ಲವೂ ಹುಸಿಯಾಗುತ್ತಿರುವಾಗ ಮೊಯಿಲಿಯವರ ಹುಸಿ ಗುಂಡಿನಿಂದಲಾದರೂ ಕೈಗಾರಿಕೆ-ಉದ್ಯೋಗಗಳ ಕನಸು ಕಾಣುತ್ತಿರುವವರನ್ನು ಹೊಡೆದೆಬ್ಬಿಸಲು ಸಾಧ್ಯವೇ.

ರಾಜ್ಯದಲ್ಲಿ ಸಾಕಷ್ಟು ಬಂಡವಾಳ ಪೋಲಾಗುತ್ತಿದೆ. ಕೈಗಾರಿಕೆಗಳ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿವೆ. ಆದರೆ ಅವುಗಳ ಸದುಪಯೋಗ ಮಾತ್ರ ಸರಿಯಾಗಿ ಆಗುತ್ತಿಲ್ಲ. ಇದನ್ನೆಲ್ಲ ಸರಿಪಡಿಸಲು ಜನರು ಮುಂದಾಗಬೇಕು. ಹೋರಾಟಬೇಕು.

ಅಧಿಕಾರಿಗಳಿಗೆ ಚಿಮ್ಮನಕಟ್ಟಿಯವರಿಗೆ ಚಾಟಿ ಏಟು

ಭಾರಿ ನೀರಾವರಿ ಮಂತ್ರಿ ಚಿಮ್ಮನಕಟ್ಟಿಯವರಿಂದ ಅಧಿಕಾರಿಗಳಿಗೆ ಚಾಟಿ ಏಟು. ಅಧಿಕಾರಿಗಳ ಅಸಡ್ಡೆಗೆ ಬೇಸತ್ತ ನಾವಂತೂ ಮಂತ್ರಿಗಳ ಈ ಕ್ರಮವನ್ನು ಸ್ವಾಗತಿಸುತ್ತೇವೆ. ಹಿರಿ ಮಂತ್ರಿಗಳ, ರಾಜಕಾರಣಿಗಳ(ಕಾಂಗ್ರೆ) ಕೃಪಾಶೀರ್ವಾದಕ್ಕೊಳಗಾದ ಈ ಮೇಲಧಿಕಾರಿಗಳನ್ನೆಲ್ಲ ಚಾಟಿಯೇಟಿನಿಂದ-ಅದೂ ಅತ್ಯಂತ ಕಿರಿಯ ಮಂತ್ರಿ ಚಿಮ್ಮನಕಟ್ಟಿಯವರ – ಪಳಗಿಸಲು ಸಾಧ್ಯವೇ ಎಂಬ ಪ್ರಶ್ನೆ. ಓಬೀರಾಯನ ಕಾಲದ ಪದ್ಧತಿ ಆಡಳಿತೆಯಲ್ಲಿ ಅಳವಡಿಸಿಕೊಂಡಿದೆ. ಅರ್ಜಿಗಳನ್ನೆಲ್ಲ ಸ್ಥಳದಲ್ಲೇ ಇತ್ಯರ್ಥಗೊಳಿಸಬೇಕೆಂದು ಮಂತ್ರಿಯವರ ಸೂಚನೆ. ನೀರಾವರಿ ಯೋಜನೆಗಳಿಗೆ ತೊಡಕಾಗಿರುವ ಮುಖ್ಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮುಖ್ಯ ಇಂಜಿನಿಯರುಗಳು ತೀವ್ರ ಅಸಹಕಾರ ಮತ್ತು ಅಲಕ್ಷ್ಯತನ ತೋರುತ್ತಿರುವರೆಂದೂ, ಇವರೆಲ್ಲ ತಿಂಗಳಿಗೆ ಹಲವಾರು ಬಾರಿ ಬೆಂಗಳೂರಿಗೆ ಅಲೆದಾಡುತ್ತಿದ್ದರೂ ಅರ್ಧಂಬರ್ಧವಾಗಿ ಉಳಿದಿರುವ ನೀರಾವರಿ ಯೋಜನೆಗಳನ್ನು ಕುರಿತು ಯಾವ ದಾಖಲೆಗಳನ್ನೂ ತಂದು ತಮ್ಮೊಂದಿಗೆ ಚರ್ಚಿಸಿ ಇತ್ಯರ್ಥಗೊಳಿಸಲು ಇಚ್ಛಿಸುತ್ತಿಲ್ಲವೆಂದೂ ಮಂತ್ರಿಗಳೂ ದೂರಿದರಂತೆ. 32 ವರ್ಷದ ಹುಡುಗ ಚಿಮ್ಮನಕಟ್ಟಿ, ಮಂತ್ರಿಯಾಗಿ ಒಂದೇ ವರ್ಷ. ಅತಿ ದೊಡ್ಡ ಖಾತೆಯ ಜವಾಬ್ದಾರಿ ತಲೆಯ ಮೇಲೆ. ಹಲವಾರು ಹಿರಿಯ ರಾಜಕಾರಣಿಗಳೂ, ಕಂಟ್ರಾಕ್ಟರರ ಜೋಡಿ ದಿನಾಲೂ ಚೆನ್ನಾಟವಾಡುವ ಅನುಭವಸ್ಥ ಅಧಿಕಾರಿಗಳಿಗೆ. ಈ ಕಿರಿಮಂತ್ರಿ ಸಾಟಿಯೇ? ಹೀಗಿರುವಾಗ ಛ್ಯಾಲು. ದಾಖಲೆಗಳೊಡನೆ ಚರ್ಚಿಸಿದರೆ ಅಪಮಾನವಲ್ಲವೇ. ಗ್ರಾಮಾಂತರದ ನೀರಾವರಿ ಪ್ರದೇಶಗಳಲ್ಲಿ ಇಂಥ ಅಧಿಕಾರಿಗಳಿಗೆ ಬೇಸರವಾಗುವುದಿಲ್ಲವೇ. ಆ ಕಾರಣದಿಂದಲೇ ಬೆಂಗಳೂರು ಪ್ರವಾಸ; ಕುಡಿತ, ಕುಣಿತ. ಅರ್ಥವಾಯಿತೇ ಚಿಮ್ಮನಕಟ್ಟಿಯವರೇ. ಕೆಲವು ಕುಪ್ರ

(6ನೇ ಪುಟ ನೋಡಿ)

ದಲಿತರು :

ಗಂಗಾವತಿ - ಕನಕಗಿರಿಯ ಮರಿ ಇಂದಿರಾಗಳು

-ಗಂಗಾಧರ ಕುಷ್ಟಗಿ

[ಕಾಂ. ಗಂಗಾಧರ ಕುಷ್ಟಗಿಯವರ ಈ ಲೇಖನದ ಮೊದಲಭಾಗ 22-11-81ರ ಐಕ್ಯರಂಗದಲ್ಲಿ "ಬೆಳ್ಳಿ ಹಬ್ಬದ ಕರ್ನಾಟಕದ ದಲಿತರು" ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿತ್ತು. ಆ ಲೇಖನದ ಮುಂದಿನ ಭಾಗವನ್ನು 29-11-81 ಐಕ್ಯರಂಗದಲ್ಲಿ ಸ್ಥಳಾಭಾವದಿಂದ ಪ್ರಕಟಿಸಿರಲಿಲ್ಲ. ಕಾರಣ ಈಗ ಪ್ರಕಟಿಸುತ್ತಿದ್ದೇವೆ]

ರಾಮಲಿಂಗನ ಕೆರೆ, ತಿಪ್ಪನಾಳ ಕೆರೆ ಸಮಸ್ಯೆಗಳೊಂದಿಗೆ ವಿರುಪಾಪೂರದಲ್ಲಿ 30 ವರ್ಷಗಳಿಂದ ವಾಸಿಸುತ್ತಾ ಬಂದಿರುವ ದಲಿತರಿಗೆ ಆ ಸ್ಥಳವನ್ನು (ಸ.ನಂ. 3) ಅವರ ಹೆಸರಿಗೆ ರಜಿಸ್ಟರ್ಡ್ ಮಾಡಿಸಬೇಕು, ಹಾಗೂ ಅದೇ ಗ್ರಾಮದಲ್ಲಿ ಅಲೆಮಾರಿ ಜನಾಂಗವು ಬಹಳ ದಿನಗಳಿಂದ ವಾಸಿಸುತ್ತಾ ಇದ್ದು ಇಂದಿನವರೆಗೂ ಅವರಿಗೆ ಖಾಯಂ ನಿಲವು ಇಲ್ಲಾ. ಕಾರಣ ಕೂಡಲೆ ಅವರಿಗೆ ವಾಸಿಸಲು ಸ್ಥಳ ಒದಗಿಸಿಕೊಡಬೇಕು, ಮುಂತಾದ ಬೇಡಿಕೆಗಳನ್ನು ಮುಂದಿರಿಸಿ ಸಾಕಷ್ಟು ಸಲ ಸಂಬಂಧಿಸಿದವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಗಂಗಾವತಿ ಘಟಕವು ಮನವಿ ಸಲ್ಲಿಸಿತ್ತು. ಅಲ್ಲದೆ ಸ್ವತಃ ಜಿಲ್ಲಾಧಿಕಾರಿಗಳು ಬಂದಾಗ ಮಾತುಕತೆ ನಡೆಸಿದಾಗ ವಿಚಾರಿಸುವದಾಗಿ ಆಶ್ವಾಸನೆ ನೀಡಿದ್ದರು.

ಸರಿದಾರಿ ಯಾವುದು?

ಸರಕಾರದ ಅಧಿಕಾರಿಗಳು ಕೊಡುವ ಆಶ್ವಾಸನೆಗಳನ್ನು ನಂಬಿ ಸಾಯುವ ಪರಿಸ್ಥಿತಿ ಬಂದೊದಗಿತು. ಆಗ ದಲಿತರು ತಲೆ ಕೊಡವಿ ಎದ್ದು ಭ್ರಮೆಗಳನ್ನೆಲ್ಲ ಕಿತ್ತೊಗೆದು ಹೋರಾಟವೊಂದೇ ಉಳಿದಿರುವ ದಾರಿ ಎಂದು ತೀರ್ಮಾನಿಸಿದರು.

ಕೊನೆಯ ಪ್ರಯತ್ನವಾಗಿ ತಮ್ಮೆಲ್ಲ ಬೇಡಿಕೆಗಳನ್ನು ಮಂಡಿಸಿ, ಈ ಬೇಡಿಕೆಗಳು ಒಂದು ವಾರದ ಅವಧಿಯಲ್ಲಿ ಈಡೇರಬೇಕು. ಇಲ್ಲವಾದಲ್ಲಿ ಅನಿವಾರ್ಯವಾಗಿ ಹೋರಾಟಕ್ಕಿಳಿಯಬೇಕಾಗುತ್ತದೆಂದು ಮನವಿ ಸಲ್ಲಿಸಿದರು.

ಕ. ದ. ಸಂ. ಸ. ಮತ್ತು ಪ್ರಾಂತ ರೈತ ಸಂಘಗಳ ನೇತೃತ್ವದಲ್ಲಿ ದಲಿತರು ಹೋರಾಟಕ್ಕಿಳಿದರು. ಗಂಗಾವತಿ ತಹಸೀಲ ಆಫೀಸ್ ಎದುರಿಗಡೆ ಟೆಂಟ್ ಹಾಕಿ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಸಂಘಟನೆಗಳ ಕಾರ್ಯಕರ್ತರು ಸುತ್ತಲಿನ ಹಳ್ಳಿಗಳಿಗೆ ಹೋಗಿ ಕ್ರಾಂತಿಕಾರಿ ಗೀತೆ-ನಾಟಕಗಳನ್ನು ಹಾಡಿ, ಅಭಿನಯಿಸಿ ಹೋರಾಟದ ಅವಶ್ಯಕತೆ ಅನಿವಾರ್ಯತೆಗಳನ್ನು ತಿಳಿಸಿ ಹೇಳಿದರು. ಪ್ರತಿದಿನವೂ ಹಳ್ಳಿಗಳಿಂದ ದಲಿತರು ತಂಡ ತಂಡವಾಗಿ ಬಂದು ಸರದಿ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದರು. ಗಮನಾರ್ಹ ಸಂಗತಿಯೆಂದರೆ ಉಪವಾಸ ಸತ್ಯಾಗ್ರಹದಲ್ಲಿ ಪುರುಷರ ಸಂಖ್ಯೆಯಷ್ಟೇ ಮಹಿಳೆಯರದೂ ಇರುತ್ತಿತ್ತು.

ತಾ. 10-9-81ರಂದು ಪ್ರಾಂತ ರೈತ ಸಂಘ ಗಂಗಾವತಿ ಘಟಕವು ಬಹಿರಂಗ ಸಭೆಯೊಂದನ್ನು ಏರ್ಪಡಿಸಿತು; ಸಭೆಯನ್ನುದ್ದೇಶಿಸಿ ನರಗುಂದ ರೈತ ಬಂಡಾಯದ ಮುಖಂಡರುಗಳಲ್ಲೊಬ್ಬರಾದ ವಿ. ಎನ್. ಹಳಕಟ್ಟಿಯವರು ದಲಿತ ಹಾಗೂ ಕೃಷಿ ಕಾರ್ಮಿಕರ ಸಮಸ್ಯೆ, ಸಂಘಟನೆ, ಹೋರಾಟ ಮುಂತಾದ ವಿಷಯಗಳ ಬಗ್ಗೆ ವಿವರಿಸಿದರು. ಮತ್ತು ದಲಿತರ ಈ ಬೇಡಿಕೆಗಳು ಈಡೇರದಿದ್ದಲ್ಲಿ ರಾಜ್ಯಮಟ್ಟದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆಂದು ಒತ್ತುಕೊಟ್ಟು ಹೇಳಿದರು. ರೈತ ಸಂಘದ (ಸಿಂಧನೂರು) ಬಿ. ಲಿಂಗಪ್ಪ ಹಾಗೂ ಭಾಗ್ಯವಂತ (ಕ. ದ. ಸಂ. ಸ. - ಗಂಗಾವತಿ) ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ರಾಯಚೂರು ಜಿಲ್ಲಾ ಪ್ರಾಂತ ರೈತಸಂಘದ ಸಂಚಾಲಕ ಸಿ. ಎಸ್. ಬಾಳೆ ವಹಿಸಿದ್ದರು. ಸಭೆಯ ನಿರ್ವಹಣೆಯನ್ನು ಎಸ್. ಎಂ. ಪಾಟೀಲ ಮತ್ತು ಶರಣಯ್ಯ ವಹಿಸಿದ್ದರು.

ದಲಿತರ ಮೆರವಣಿಗೆ

ಸತತ 18 ದಿನಗಳ ಕಾಲ ಉಪವಾಸ ಕುಳಿತರೂ ಯಾವದೇ ಪ್ರಯೋಜನವಾಗಲಿಲ್ಲ. ತಾ. 21-9-81 ರಂದು ಕ. ದ. ಸಂ. ಸ. ಯು ನೇತೃತ್ವದಲ್ಲಿ ಬೃಹತ್ ಮೆರವಣಿಗೆಯೊಂದನ್ನು ಸಂಘಟಿಸಲಾಯಿತು. ಸುತ್ತಲಿನ ಹಳ್ಳಿಗಳಿಂದ ದಲಿತರು ತಂಡೋಪತಂಡವಾಗಿ ಬಂದು ಮೆರವಣಿಗೆಯಲ್ಲಿ ಭಾಗವಹಿಸಿ ಗಂಗಾವತಿ ನಗರದಲ್ಲಿ ಚರಿತ್ರೆಯನ್ನು ನಿರ್ಮಿಸಿದರು. ಸಾವಿರಕ್ಕೂ ಮೇಲ್ಪಟ್ಟು ಜನ ಭಾಗವಹಿಸಿದ್ದರು. ಇದರಲ್ಲೂ ಸುಮಾರು 400ಜನ ಮಹಿಳೆಯರಿದ್ದರು.

ಈ ನಡುವೆ ಸ್ವಯಂ ಘೋಷಿತ ದಲಿತ ನಾಯಕರು, ಪೈರವಿಕಾರರು, ಪುಢಾರಿಗಳು ಎಲ್ಲಿಲ್ಲದ ಕಕ್ಕುಲತೆಯನ್ನು ತೋರಿಸಿದರು! ನೀವೆಲ್ಲ ಸತ್ಯಾಗ್ರಹ ಹಿಂತೆಗೆದುಕೊಳ್ಳಿ. ನಾವು ನಿಮ್ಮ ಕೆಲಸ ಮಾಡಿಕೊಡುತ್ತೇವೆ. ನಾವಿರುವುದೇ ನಿಮಗಾಗಿ, ನೀವೇನೂ ಚಿಂತಿಸಬೇಡಿ ಎಂದು ತಮ್ಮ ಅಭಯ ಹಸ್ತ ಕೊಡಲು ಬಂದರು. ದಲಿತರು ಅವರಿಗೆ ಛೀಮಾರಿ ಹಾಕಿ ಟೆಂಟ್ ಸಮೀಪವೂ ಬರದಂತೆ ಮಾಡಿದರು.

ಶಾಸಕ-ಅಧಿಕಾರಿಗಳ ತುರ್ತಿನ ಓಡಾಟ !

ನಮ್ಮ ದೇಶದಲ್ಲಿ ಸುದ್ದಿ ಸಮಾಚಾರಗಳು ಕಳಿಸಿದ ನಂತರ ತಲುಪಲು ಹಲವು ವರ್ಷಗಳೇ ಬೇಕಾಗುವ ವಿಷಯಕ್ಕೆ ಪೋಲೀಸ್ ಇಲಾಖೆ ಅಪವಾದ. ಇಂತಹ ಹೋರಾಟ-ಚಟುವಟಿಕೆಗಳು ಕ್ಷಣಾಂತರಗಳಲ್ಲೇ ಎಲ್ಲೆಂದರಲ್ಲೆ ತಲುಪುತ್ತವೆ. ಹೋರಾಟದ ಮುಂದಿನ ಗಂಭೀರತೆ-ಉಗ್ರತೆಗಳ ಮಾಹಿತಿ ಜಿಲ್ಲಾಧಿಕಾರಿಗಳಿಗೆ ಸಿಕ್ಕಿತು.

ಅಂದೇ ಜಿಲ್ಲಾಧಿಕಾರಿಗಳು ಹೋರಾಟದ ಮುಖಂಡರನ್ನು ಮಾತುಕತೆಗೆ ಕರೆದರು. ಅವರೊಂದಿಗೆ ಗಂಗಾವತಿ ಹಾಗೂ ಕನಕಗಿರಿ ಕ್ಷೇತ್ರಗಳ ಶಾಸಕ ಮಹಾಶಯರಿಬ್ಬರೂ ಇದ್ದದ್ದು ತಿಳಿದು, ಅವರಿದ್ದರೆ ನಾವು ಯಾವ ಮಾತುಕತೆಗೂ ಬರುವುದಿಲ್ಲವೆಂದು ಮುಖಂಡರು ನಿರಾಕರಿಸಿದರು. ಆಗ ದಲಿತರು ಶಾಸಕದ್ವಯರ ವಿರುದ್ಧ ಘೋಷಣೆಗಳನ್ನು ಕೂಗಿ ಘೇರಾವ್ ಮಾಡಿದರು.

ಜಿಲ್ಲಾಧಿಕಾರಿಗಳೊಡನೆ ಚರ್ಚಿಸಲು ಹೋರಾಟವನ್ನು ತೀವ್ರವೇ ಹಿಂತೆಗೆದುಕೊಳ್ಳಿ ಮತ್ತು ನನಗೆ ಎರಡು ತಿಂಗಳ ಕಾಲ ಅವಕಾಶ ಕೊಡಿ ನಂತರದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯ ಎಂದು ಹೇಳಿದರು. ಅದಕ್ಕೆ ದಲಿತ ಮುಖಂಡರು ಹೀಗೆ ಕಾಲಾವಕಾಶಕೊಟ್ಟು ಸಾಕಾಗಿ ಈ ಹೋರಾಟಕ್ಕಿಳಿದಿದ್ದೇವೆ. ಬೇಡಿಕೆಗಳು ಈಡೇರುವವರೆಗೆ ಹೋರಾಟ ನಿಲ್ಲದು ಎಂದು ಖಡಾಖಂಡಿತವಾಗಿ ತಿಳಿಸಿದರು.

ಕೋಪಗೊಂಡ ಜಿಲ್ಲಾಧಿಕಾರಿ, ನೀವು ಇಷ್ಟು ಹಟ ಹಿಡಿದರೆ ಅದು ಹೇಗೆ ಹೋರಾಟ ಮಾಡುವಿರೋ ನೋಡುತ್ತೇನೆ. ನಿಮ್ಮ ಟೆಂಟ್ ಕಿತ್ತಿಸುತ್ತೇನೆ. ಹಾಗೆ-ಹೀಗೆ ಎಂದು ಕೂಗಾಡಿದರು. ಕೂಡಲೇ ಮುಖಂಡರು ಮಾತುಕತೆಗೆ ಪೂರ್ಣವಿರಾಮ ಹಾಕಿ ಹೊರಬಂದರು.

ಆಗ ದಲಿತ ಮಹಿಳೆಯರೆಲ್ಲ ಸೇರಿ ಜಿಲ್ಲಾಧಿಕಾರಿಗಳಿಗೆ ಅದು ಹೇಗೆ ಟೆಂಟ್ ಕಿತ್ತಿಸುತ್ತೀಯೋ ಕಿತ್ತಿಸು ಎಂದು ಜಿಲ್ಲಾಧಿಕಾರಿಗಳಿಗೆ ಘೇರಾವ್ ಮಾಡಿದರು. ಸರಿದರೆ ಒತ್ತುವ ಒತ್ತಿದರೆ ಸರಿವ ನೀತಿಯಂತೆ ಜಿಲ್ಲಾಧಿಕಾರಿಗಳು ಬೇರೆ ದಾರಿ ಕಾಣದೆ ಬೇಡಿಕೆಗಳನ್ನು ಪರಿಶೀಲಿಸಿ, ಕೂಡಲೇ ಈಡೇರಿಸುವುದಾಗಿ ಒಪ್ಪಿದರು. ಹೋರಾಟದ ಪರಿಣಾಮವಾಗಿ, ರಾಮಲಿಂಗನ ಕೆರೆಯನ್ನು ಕೂಡಲೇ ಸರ್ವೆ ಮಾಡುವಂತೆ ಆಜ್ಞೆಮಾಡಿ, ಇತ್ಯರ್ಥವಾಗುವ ತನಕ ಆ ಜಮೀನಿಗೆ ಯಾರೂ ಕೈಹಾಕದಂತೆ "ಸ್ಟೇ" ಆರ್ಡರ್ ಹೊರಡಿಸಿದ್ದಾರೆ. ಅಲೆಮಾರೀ ಜನಾಂಗಕ್ಕೆ ಒಂದು ಖಾಯಂ ವಾಸಸ್ಥಳವನ್ನು ಕೂಡಲೇ ಒದಗಿಸುವುದಾಗಿ ಒಪ್ಪಿದ್ದಾರೆ. ಇದಲ್ಲದೆ ಗಂಗಾವತಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ದಲಿತರು ಸರಕಾರಿ ಜಮೀನನ್ನು ಸಾಗುವಳಿ ಮಾಡುತ್ತಿರುವರೋ ಅವರೆಲ್ಲರಿಗೂ ಪಟ್ಟಾ ಕೊಡುವುದಾಗಿ ಒಪ್ಪಿದ್ದಾರೆ. ಉಳಿದೆಲ್ಲ ಬೇಡಿಕೆಗಳು ಪರಿಶೀಲನೆಯಲ್ಲಿವೆ.

ಇವೆಲ್ಲ ತೀವ್ರವಾಗಿ ಅನುಷ್ಠಾನಕ್ಕೆ ಬಾರದಿದ್ದಲ್ಲಿ ದಲಿತರು ಹೋರಾಟ ಮುಂದುವರೆಸಲು ಅಣಿಯಾಗಿ ಕುಳಿತಿದ್ದಾರೆ.

●

ಪಂಜಾಬ್ : ಯುವಜನ ಸಮಾವೇಶ

ನವೆಂಬರ್ 1ರಂದು ಲೂದಿಯಾನಾದ ಛತ್ತರಪಾರ್ಕ್ ಎಂಬಲ್ಲಿ ರಾಜ್ಯಮಟ್ಟದ ಯುವಜನ ಸಮಾವೇಶ ನಡೆಯಿತು. ಡಿ. ವೈ. ಎಫ್. ಐ. ಪ್ರಥಮ ಸ್ಥಾಪನಾ ದಿನಾಚರಣೆಯ ಅಂಗವಾಗಿ ಈ ಸಮಾವೇಶ ನಡೆಯಿತು.

ಸಮಾವೇಶವನ್ನು ಉದ್ಘಾಟಿಸಿದ ಪ್ರಖ್ಯಾತ ಕ್ರಾಂತಿಕಾರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ಮುಖಂಡ ಕಾಂ. ಕಿಶೋರಿಲಾಲ್‌ರು ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮುವಾದಿ ಶಕ್ತಿಗಳ ಚಟುವಟಿಕೆ ಕುರಿತು ವಿಮರ್ಶೆ ವ್ಯಕ್ತಪಡಿಸಿದರು. ಇವೇ ಶಕ್ತಿಗಳು ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೂ ದೇಶದ್ರೋಹಿ ಚಟುವಟಿಕೆಗಳಲ್ಲಿ ತೊಡಗಿದ್ದನ್ನು ಕಾಂ. ಕಿಶೋರಿಲಾಲ್‌ರು ಜ್ಞಾಪಿಸಿಕೊಂಡರು. ಸಮಾವೇಶದಲ್ಲಿ ಪಾಲ್ಗೊಂಡಿದ್ದ 300 ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಈ ವಿಚ್ಛಿದ್ರಕಾರಿ ಶಕ್ತಿಗಳನ್ನು ಬಯಲಿಗೆಳೆಯುವಂತೆ ಕರೆ ನೀಡಿದರು.

ಪಂಜಾಬ್ ಡಿ. ವೈ. ಎಫ್. ಐ. ಘಟಕದ ಪ್ರಧಾನಕಾರ್ಯದರ್ಶಿ ಕಾಂ. ಕುಲದೀಪ್ ಸಿಂಗರು ಮತೀಯ ತೀವ್ರಗಾಮಿಗಳ ಚಟುವಟಿಕೆಗಳನ್ನು ಖಂಡಿಸುವ ಮುಖ್ಯ ನಿರ್ಣಯ ಮಂಡಿಸಿದರು. ನಿರ್ಣಯವನ್ನು ಬೆಂಬಲಿಸಿ ಕಾಂ. ಜೋಗಿಂದರ್ ಸಿಂಗ್, ಕಮಲ್‌ಜೀತ್‌ಸಿಂಗ್, ಸಂತಾ ಮ್‌ ಸಿಂಗ್ ಮೊದಲಾದವರು ಮಾತನಾಡಿದರು.

●

ಉಪವಾಸ ಸತ್ಯಾಗ್ರಹ

ಚಿಕ್ಕಮಂಗಳೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಹಂಗಾಮಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ 140 ಹಂಗಾಮಿ ಶಿಕ್ಷಕರನ್ನು ವಜಾಮಾಡಲಾಗಿದೆ. ಜಿಲ್ಲೆಯಲ್ಲಿ ನೂರಾರು ಶಿಕ್ಷಕರ ಕೊರತೆ ಇದ್ದರೂ ಈ ಕ್ರಮ ತೆಗೆದುಕೊಂಡ ಸರಕಾರವನ್ನು ಖಂಡಿಸಿ ಹಂಗಾಮಿ ಶಿಕ್ಷಕರು ಚಿಕ್ಕಮಗಳೂರಿನ ಡಿ. ಡಿ. ಪಿ. ಐ. ಆಫೀಸೆದುರು ಉಪವಾಸ ಮುಷ್ಕರ ಹೂಡಿದ್ದಾರೆ.

ಸರಕಾರದ ಈ ಕ್ರಮವನ್ನು ಪ್ರತಿಭಟಿಸಿ, ಶಿಕ್ಷಕರನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಚಿಕ್ಕಮಂಗಳೂರು ಜಿಲ್ಲಾ ವಿದ್ಯಾರ್ಥಿ-ಯುವಜನ ಸಂಘಟನೆಗಳು ಒತ್ತಾಯಿಸಿವೆ. 19-11-81 ರಂದು ವಿದ್ಯಾರ್ಥಿ-ಯುವಜನ ನಿಯೋಗವೊಂದು ಉಪವಾಸ ಸತ್ಯಾಗ್ರಹ ಹೂಡಿರುವ ಶಿಕ್ಷಕರಲ್ಲಿಗೆ ಹೋಗಿ ಬೆಂಬಲಸೂಚಿಸಿದೆ. ●

ಓ ನನ್ನ ಜನರೇ

["ಸೆಪ್ಟೆಂಬರ್ 1973 ಮೊನೆದಾ-ಚಿಲಿಯ ರಾಷ್ಟ್ರಪತಿಭವನ ಬಾಂಬು ದಾಳಿಗೀಡಾಗಿದೆ. ಕೆಲ ದಿನಗಳಿಂದ ಅಮೇರಿಕನ್ ಸಾಮ್ರಾಜ್ಯಶಾಹಿಯ ನೆರವಿನಿಂದ ಮಿಲಿಟರಿ ದುಷ್ಟಕೂಟದ ಫ್ಯಾಸಿಸ್ಟರು ಇಡೀ ಚಿಲಿಯನ್ನೇ ಬಂದೀಖಾನೆಯಾಗಿಸಿದ್ದಾರೆ. ಎಲ್ಲೆಲ್ಲೂ ನರಹತ್ಯೆ-ಯಾತನಾಶಿಬಿರಗಳು ಶುರುವಾಗಿವೆ. ಚಿಲಿಯ ಗಲ್ಲಿಗಳಲ್ಲೆಲ್ಲ ನೆತ್ತರು ಹರಿದಿದೆ, ಕಂಡಕಂಡಲ್ಲೆಲ್ಲ ಸಮೂಹ ಕೊಲೆಗಳಾಗುತ್ತಿವೆ. ಈ ಎಲ್ಲ ಹೀನ ಕೃತ್ಯಗಳೊಂದಿಗೇ ಹೆಂಗಳೆಯರ ಅವಿರತ ಮಾನಭಂಗ ನಡೆದಿದೆ ಕೊಲೆಗಡುಕರು ಅನೇಕ ಕಡೆ ಹೆಣಗಳನ್ನೆಲ್ಲ ಬೀದಿಯ ಮೇಲೆ ಬಿಟ್ಟು "ಇದು ಪಾಠ" ಎಂದು ಹೇಳುತ್ತಿದ್ದಾರೆ. ಇದು ಫ್ಯಾಸಿಸ್ಟರ ಶಿಕ್ಷಣ ವೈಖರಿ!

ಇಂಥ ಪರಿಸ್ಥಿತಿಯಲ್ಲೂ ಶಾಂತಿಯ ಪ್ರತಿಪಾದಕರಾದ ಚಿಲಿಯ ರಾಷ್ಟ್ರಪತಿ ಅಲೆಂಡೆ ಎದೆಗುಂದಲಿಲ್ಲ ಹೇಡಿಯಂತೆ ಮೊನೆದಾ ಬಿಟ್ಟು ಓಡಿ ಹೋಗಲಿಚ್ಛಿಸುತ್ತಿಲ್ಲ ತಮ್ಮ ಜನರಲ್ಲಿ ಐಕ್ಯತೆ ಮತ್ತು ಪ್ರತಿಭಟನಾ ಶಕ್ತಿಯನ್ನು ತುಂಬಲು ಪ್ರಯತ್ನಿಸುತ್ತಿದ್ದಾರೆ. ಅವರು ಜನತೆಯನ್ನುದ್ದೇಶಿಸಿ ಮಾತನಾಡಿದ್ದನ್ನು ಮಗಳು ಇಸಾಬೆಲಾ ಧ್ವನಿಮುದ್ರಣ ಮಾಡಿಕೊಂಡಳು, ಯುದ್ಧ ನಿಪುಣರಲ್ಲದವರನ್ನೆಲ್ಲ ಅಲೆಂಡೆ ಒತ್ತಾಯದಿಂದ ಹೊರಗೆ ಕಳಿಸಿದರು. ಮುಂದೆ "ಮೊನೆದಾ" ಬಾಂಬು ದಾಳಿಗೀಡಾಯಿತು.

ಸಾಯುವ ಮೊದಲು ಅವರು ಮಾಡಿದ ಆ ಕೊನೆಯ ಭಾಷಣ ಈ ಕವನಕ್ಕೆ ಆಧಾರ]

ಓ ನನ್ನ ಜನರೇ ಇದು ನನ್ನ ಕೊನೆಯ ಮಾತು.
ದಾಳಿಯಿಟ್ಟಿವೆ ವಿಮಾನಗಳು ಆಕಾಶವಾಣಿಯ ಮೇಲೆ
ನನ್ನ ಮಾತಿನಲ್ಲಿ ಕಹಿಯಿಲ್ಲ ಆದರೆ ಆಶಾಭಂಗವಿದೆ
ನೈತಿಕ ಶಿಕ್ಷೆಯಿದೆ ವಚನ ಕೊಟ್ಟು ಮೋಸಗೊಳಿಸಿದವರಿಗೆ

ಚಿಲಿಯ ಸಮುದಾಯವೇ ಕೇಳಿ; ನಿನ್ನೆಯ ವರೆಗೂ
ಮೆಂಡೋಡ ಮಹಾಶಯ ತೋರಿಸುತ್ತಿದ್ದ ವಿಧೇಯತೆ
ಆದರೆ ಇಂದು ನೋಡಿ! ಕೊಲೆಗಡುಕರ ಮಾರ್ಗದರ್ಶಿಯಾದ
ಗಾಯಗೊಳಿಸಿದ್ದಾರೆ ಚಿಲಿಯನ್ನು ಇವರು-ಕೊಲ್ಲಲು ಸಾಧ್ಯವಿಲ್ಲ.

ಕಾರ್ಮಿಕರೇ, ರೈತರೇ, ನನ್ನ ದೇಶದ ಸಮಸ್ತ ಜನರೇ
ಬರ್ಬರರು ಮಾಡಿದ ಈ ಸ್ಥಿತಿಯ ಮುಂದೆ ನಿಂತು
ಹಿಂಜರಿಯದೇ ಹೇಳುತ್ತಿದ್ದೇನೆ "ನಾ ಬಿಟ್ಟುಕೊಡಲಾರೆ"
ಸಮಸ್ತ ಜನತೆಯ ಈ ನೆಚ್ಚಿನ ಸೊತ್ತನ್ನು – ನನ್ನ ಚಿಲಿಯನ್ನು

ಈ ಐತಿಹಾಸಿಕ ನಿರ್ಣಯದಲ್ಲಿ ನನ್ನನ್ನೇ ನಾನು ಬಲಿಕೊಡುವೆ
ಇದು ನನ್ನ ಜನರಿಗೆ ತೋರಿಸುವ ನಿಜವಾದ ವಿಧೇಯತೆ
ಹೌದು ನಾ ಸಾಯಬಹುದು ನಾನೊಬ್ಬ ಬರೀ ಮನುಷ್ಯ
ನಾ ಸತ್ತರೇನು ಈ ಚಿಲಿಯ ಮಣ್ಣಲ್ಲಿ ಮತ್ತು ಹುಟ್ಟುತ್ತಾರೆ.

ಮತ್ತೆ ಮತ್ತೆ ಒತ್ತಿ ಹೇಳೀಳುವೆ-ಭರವಸೆ ಕೊಡುವೆ
ಯಾವ ಸಂಶಯವೂ ಇಲ್ಲ ಚಿಲಿಯ ಬದುಕಿನಲ್ಲಿ
ಬೆಳೆಯುತ್ತಲೇ ಹೋಗುವುದು ಬಿತ್ತಿದ ಆತ್ಮಸಾಕ್ಷಿಯ ಬೀಜ
ನಮ್ಮ ಘನೋದ್ದೇಶಗಳು ಈಡೇರುತ್ತಲೇ ಹೋಗುವವು.

ನೀವೇ ಹೌದು ನೀವೇ ಇತಿಹಾಸ ಸೃಷ್ಟಿಸುವವರು
ಇತಿಹಾಸ ನಮ್ಮದಿದ-ಇತಿಹಾಸ ಸೃಷ್ಟಿಸುವವರದು
ವೈರಿಗಳಿಂದು ಬಲಿಷ್ಠರಿದ್ದಾರೆ ಗುಲಾಮಗಿರಿಗೆಳೆಯಬಹುದು
ಅಪರಾಧದಿಂದ - ಒತ್ತಾಯದಿಂದ ಜನತೆಯನ್ನು ಆಳಲಾಗದು

ನಾನೊಬ್ಬ ಮನುಷ್ಯ ನ್ಯಾಯದ ಮಹಾಬಯಕೆಗಳಿಗೆ ಬಾಯಿಯಾದವ
ಸಂವಿಧಾನಕ್ಕೆ - ನ್ಯಾಯಕ್ಕೆ ಬೆಲೆಯಿತ್ತವ - ವಚನಕ್ಕೆ ಬದ್ಧನಾದವ
ಸದಾ ನೀವು ನಂಬಿಕೆಯಿಟ್ಟು ಒಗ್ಗಟ್ಟನ್ನು ಎತ್ತಿ ತೋರಿಸಿದಿರಿ
ನನಗಾವ ಭಯವಿಲ್ಲ ಕೇವಲ ನಿಮಗಾಗಿ ಚಿಂತಿಸುತ್ತಿರುವೆ

ಈ ಕ್ರೂರ ಘಳಿಗೆ, ನಾ ಮಾತನಾಡಬಲ್ಲ ಕೊನೆ ಘಳಿಗೆ
ಈ ಘಟನೆಗಳಿಂದ ಏನು ಕಲಿಯಬಹುದೆಂಬುದನ್ನು
ನಾ ನಿಮಗೆ ಒಂದೊಂದಾಗಿ ಬಿಡಿಸಿ ತಿಳಿಸಬಲ್ಲೆ
ಯಾರ ಕೈವಾಡವಿದು ಏಕೆ ಎಂಬುದನ್ನೂ ತಿಳಿಸಬಲ್ಲೆ!

ಪರದೇಶದ ಬಂಡವಾಳ ಸಾಮ್ರಾಜ್ಯವಾದ ಕೈ ಕೂಡಿಸಿದವು
ಪ್ರತಿಗಾಮಿ ಶಕ್ತಿಗಳೊಡನೆ ಹೂಡಿದವು ಹೂಟ ಹುಗೆಯೇಳುವಂತೆ
ಸೈನ್ಯ ಮುರಿಯಿತು ಸಂಪ್ರದಾಯ-ಬಲಿಯಾಯಿತು ವ್ಯವಸ್ಥೆಗೆ
ಗಾಯವಾಯಿತು ಚಿಲಿಗೆ, ಚಿಲಿ ಸತ್ತಿಲ್ಲ–ಸಾಯುವುದಿಲ್ಲ

ಬಾಂಬುದಾಳಿಗೀಡಾಗಿ ಬಾನುಲಿ ಬರಿದಾಗಿದೆ-ಮೌನವಾಗಿದೆ
ನನ್ನ ಸ್ಪಷ್ಟ ಶಬ್ದಗಳು ನಿಮಗೆ ಕೇಳಿಸದಂತಾಗಿವೆ
ಕಾರ್ಮಿಕರ ನಿಷ್ಠೆಗೆ ನಿಷ್ಠೆ ತೋರಿದ ಯೋಗ್ಯ ಮನುಷ್ಯನ
ನೆನಪು ಉಳಿಯುವುದು ನಿಮ್ಮಲ್ಲಿ-ಸದಾ ನಿಮ್ಮೊಡನೇ ಇರುವೆ

ನನ್ನ ನೆಲದ ವಿನಮ್ರ ಸ್ತ್ರೀಯರೇ, ವೀರರ ತಾಯಂದಿರೆ
ಕಾರ್ಖಾನೆಯಲ್ಲಿ-ಹೊಲದಲ್ಲಿ ದುಡಿಯುವ ಹೆಣ್ಣು ಮಕ್ಕಳೇ
ನೀವು ಹೆಚ್ಚು ಹೆಚ್ಚು ದುಡಿದು ದೇಶದ ಹಸಿವು ಹಿಂಗಿಸಿದಿರಿ
ನಾ ನಿಮ್ಮೆಲ್ಲರಿಗಾಗಿ ಈ ಸಮಯದಲ್ಲೂ ಹೃದಯತುಂಬಿ ಪೂಕಾಹುವೆ

ದೇಶಾಭಿಮಾನಿಗಳೇ, ವಿವಿಧ ಬಗೆಯ ಉದ್ಯೋಗಿಗಳೇ
ಕೆಲ ದಿನಗಳ ಹಿಂದೆ, ಬರ್ಬರ ಪ್ರತಿಕ್ರಾಂತಿಯ ಸಮಯದಲ್ಲಿ
ಜನರ ರಕ್ತ ಹೀರುವ ಸುಲಿಗೆ ಸಾಮ್ರಾಜ್ಯದ ಸಂಸ್ಥೆಗಳ
ಬಾಡಿಗೆಯ ಬಂಟರೊಡನೆ ಹಂಗುದೊರೆದು ಹೋರಾಡಿದಿರಿ

ನಾಡಿನ ಯುವಜನರೇ ನಿಮ್ಮನ್ನುದ್ದೇಶಿಸಿ ಮಾತನಾಡುತ್ತಿರುವೆ
ಈ ದೇಶದ ವೀರಗೀತೆಗಳನ್ನು ಹಾಡುತ್ತ ನೀವೆಲ್ಲ
ನಿಮ್ಮ ಹೋರಾಟದ ಹುರುಪಿನಲ್ಲಿ ಸಂತೋಷ ಕೊಟ್ಟಿರಿ
ನನ್ನ ಚಿತ್ತ ಬಿತ್ತಿಯ ಮೇಲೆ ನೀವೆಲ್ಲ ಕಿಕ್ಕಿರಿದು ತುಂಬಿದಿರಿ

ಹಿಂಸೆಗೊಳಪಟ್ಟು ನರಳುತ್ತಿರುವ ನನ್ನ ಜನರೇ,
ಚಿಲಿಯ ಹೃದಯಗಳೇ, ಕಾರ್ಮಿಕರೇ, ರೈತರೇ,
ಕರಾಳ ಫ್ಯಾಸಿಜಮ್ಮಿನ ಭಯೋತ್ಪಾದಕ ಆಕ್ರಮಣದಿಂದ
ಸೇತುವೆಗಳು, ರೇಲ್ವೆಗಳು, ಎಣ್ಣೆಗೊಳವೆಗಳು ಹಾಳಾಗಿವೆ

ಸ್ತಬ್ಧತೆಯನ್ನು ಗಮನಿಸಿ: ನಾಳೆ ಇತಿಹಾಸ ನ್ಯಾಯಸ್ಥಾನದಲ್ಲಿರುವುದು
ಅವರು ಏನಾಗಬೇಕಿತ್ತೋ ನಾಳೆ ಅದೇ ಆಗುವರು
ಭವಿಷ್ಯ ನಮ್ಮದಿದೆ-ತಿಳಿಯಿರಿ ಭವಿಷ್ಯ ದುಡಿಯುವವರದಿದೆ
ಚಿಲಿ ಸತ್ತಿಲ್ಲ ಸಾಯುವುದಿಲ್ಲ ಅದ ಬರೀ ಗಾಯಗೊಂಡಿದೆ

ಜನರೇ ನಿಮ್ಮನ್ನು ರಕ್ಷಿಸಿಕೊಳ್ಳಿ ಬಲಿದಾನ ಮಾಡಬೇಡಿ
ಸ್ವಂತ ಹಿಂಸೆಗೊಳಪಡಬೇಡಿ, ಹಾಳಾಗಬೇಡಿ
ನಂಬಿಕೆಯಿಂದ ನನಗೆ ಚಿಲಿಯ ಭವಿಷ್ಯದಲ್ಲಿ
ನವಸಮಾಜದ ಹೊಣೆ ಹೊತ್ತ ನೀವು ಇದನ್ನಾಳುವಿರಿ

ಬಹುದಿನ ಬದುಕಲಿ ಚಿಲಿ–ಚಿಲಿ ಬದುಕಲಿ ಬಹುದಿನ
ಜನ-ಕಾರ್ಮಿಕರು ಬದುಕಲಿ ತುಂಬು ದಿನಗಳವರೆಗೆ
ನನ್ನ ತ್ಯಾಗ ಹಾಳಾಗುವಂತಹದಲ್ಲ-ಇದು ಪಾಠ
ನಿರ್ದಯತೆಗೆ, ಹೇಡಿತನಕ್ಕೆ, ವಿಶ್ವಾಸಘಾತಕ್ಕೆ ನೈತಿಕ ಶಿಕ್ಷೆ

—ರಮಜಾನ್ ದರ್ಗಾ
("ಪೃಥ್ವಿ" ಸೌಜನ್ಯದಿಂದ)

ಸುಳ್ಳು ಹೇಳುವವರ ನಾಲಿಗೆ ಕತ್ತರಿಸಬೇಕೇ?

(3ನೇ ಪುಟದಿಂದ)

ಸಿದ್ಧ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿರುವಿರಿ, ಸ್ವಾಗತ. ಆದರೆ ಸಿಮೆಂಟ್--ಕಬ್ಬಿಣಗಳನ್ನೂ ಪ್ರಯಾಣ ನಿಲ್ಲಿಸಿಲ್ಲ. ಅಧಿಕಾರಿಗಳ ಜೀಪಿನ ಪೆಟ್ರೋಲ್ ಖರ್ಚು ಕಡಿಮೆಯಾಗಿಲ್ಲ. ಇನ್ನೂ ಬಿಗಿಯಾಗಲಿ ನಿಮ್ಮ ಹಿಡಿತ. ಅದಕ್ಕೆ ನಮ್ಮ ಬೆಂಬಲ.

ಆದರೆ ಭಾರಿ ಮತ್ತು ಮಧ್ಯಮ ನೀರಾವರಿ ಪ್ರದೇಶಗಳಲ್ಲಿ 3-4 ಸಾವಿರದಷ್ಟು ಜ್ಯೂನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಹಾಗೆಯೇ ಕ್ಲಾರ್ಕ್ ಮತ್ತು ಅಟೆಂಡರುಗಳು ಕಳೆದ 8-10 ವರ್ಷಗಳಿಂದಲೂ ಕನ್‌ಸಾಲಿಡೇಟೆಡ್ ಪಗಾರದಲ್ಲೇ ಕೆಲಸಮಾಡುತ್ತಿದ್ದಾರಲ್ಲ. ಉದ್ಯೋಗ ವಿನಿಮಯ ಕೇಂದ್ರದಿಂದಲೇ ಇವರನ್ನೆಲ್ಲ ಕಾಯಂ ಸ್ಥಳಗಳಲ್ಲೇ ನೇಮಿಸಿಕೊಂಡಿರುವಿರಲ್ಲಾ. ಇವರಲ್ಲಿ ಏಷ್ಟೋ ಜನರಿಗೆ ಮದುವೆಯಾಗಿ ಮಕ್ಕಳಾಗಿವೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಇವರ ಹೆಸರನ್ನೆಲ್ಲ ಕಡಿಮೆ ಮಾಡಿದ್ದಾರೆ. ನೂರಾರು ಜನರ ವಯಸ್ಸು ಮೀರಿದೆ. ಇವರನ್ನೆಲ್ಲ ಕಾಯಂಗೊಳಿಸದೆ, 9 ತಿಂಗಳಿಗೊಮ್ಮೆ ಇವರ ಸರ್ವಿಸ್ ಬ್ರೇಕ್‌ಮಾಡಿ ಸಂಬಳದಲ್ಲಿ ರೂ. 10/- ಕಡಿಮೆಕೊಟ್ಟು ರಾತ್ರಿಹಗಲು ದುಡಿಸಿಕೊಂಡು ಈಗ ಅವರಿಗೆ ಮನೆಗಪ್ಪಣೆ ಕೊಡುವ ವಿಚಾರ ಮಾಡುತ್ತಿರುವುದು ಅನ್ಯಾಯವಲ್ಲವೇ ಚಿಮ್ಮನಕಟ್ಟಿಯವರೇ? ಇವರನ್ನೆಲ್ಲ ಕಾಯಂಮಾಡುತ್ತೀರೆಂದು ಆಶಿಸಲೇ.

ಪ್ರಜಾಪ್ರಭುತ್ವ ರಕ್ಷಣೆಗಾಗಿ ಸಿ.ಪಿ.ಎಂ. ಬೆಳೆಸಿರಿ

ದೇಶದಲ್ಲಿ ಸರ್ವಾಧಿಕಾರಿ ಶಕ್ತಿಯನ್ನೆದುರಿಸಿ ಪ್ರಜಾಪ್ರಭುತ್ವ-ನಾಗರೀಕ ಹಕ್ಕುಗಳನ್ನು ಉಳಿಸಬೇಕಾದರೆ, ರೈತರ-ಕಾರ್ಮಿಕರ ಹಿತರಕ್ಷಣೆ ಮಾಡಬೇಕಾದರೆ, ಶಿಕ್ಷಣದಲ್ಲಿ ಬದಲಾವಣೆ ಮಾಡಿ, ನಿರುದ್ಯೋಗ ಸಮಸ್ಯೆ ಬಗೆಹರಿಸಬೇಕಾದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನು ಬೆಳೆಸಿ, ಬಲಿಷ್ಠವಾದ ಎಡ ಪ್ರಜಾಪ್ರಭುತ್ವ ರಂಗ ಕಟ್ಟುವುದು ಅತ್ಯಗತ್ಯವೆಂದೂ, ಸಿ. ಪಿ. ಎಂ. ಬೆಳೆಸಲು ಸಾರ್ವಜನಿಕರು ಸಹಾಯ ಮಾಡಬೇಕೆಂದೂ, ಸಿ. ಪಿ. ಎಂ. ಮುಖಂಡರಾದ ರಾಮಚಂದ್ರರಾವ್ ಬಿಜಾಪುರದಲ್ಲಿ 29ರಂದು ಸಂಜೆ ಸಾರ್ವಜನಿಕ ಸಭೆಯಲ್ಲಿ ಕರೆಕೊಟ್ಟರು. ಗುಲ್ಬರ್ಗದ ಪಾರ್ಟಿ ಮುಖಂಡ ಮಹಮ್ಮದ್ ಹಸನ್‌ಖಾನ್ ತಮ್ಮ ಭಾಷಣದಲ್ಲಿ ಹರಿಜನ-ಗಿರಿಜನ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳನ್ನು ವಿವರಿಸಿ, ಇವುಗಳನ್ನೆಲ್ಲ ಎದುರಿಸಲು ಸಂಘಟನೆ-ಸಂಘರ್ಷ ಅಗತ್ಯವೆಂದು ಹೇಳಿದರು. ಎನ್. ಕೆ. ಉಪಾಧ್ಯಾಯರು ಜಿಲ್ಲಾ ಸಮ್ಮೇಳನದಲ್ಲಿ ಪಾಸಾದ ನಿರ್ಣಯಗಳನ್ನು ವಿವರಿಸಿದರು. ಡಿ. ಎಂ. ಖಲಾಸಿಯವರು ಅಧ್ಯಕ್ಷತೆ ವಹಿಸಿದ್ದರು.

ತಾ. 28ರಂದು ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರಾಮಚಂದ್ರರಾವ್, ಮಹಮ್ಮದ್ ಹಸನಖಾನ ಮತ್ತು ಎನ್. ಕೆ. ಉಪಾಧ್ಯಾಯರು ದೇಶದ ರಾಜಕೀಯ ಪರಿಸ್ಥಿತಿ, ಬೆಲೆಯೇರಿಕೆ ಸಮಸ್ಯೆ, ರೈತರ ಸಂಟಿಗೆಗಳ ಕುರಿತು ಮಾತಾಡಿದರು.

ಬಿಜಾಪುರ ಪಾರ್ಟಿ ಸಮ್ಮೇಳನ ನವೆಂಬರ್ 28-29ರಂದು ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಎನ್. ಕೆ. ಉಪಾಧ್ಯಾಯರು 4 ವರ್ಷಗಳ ಚಟುವಟಿಕೆ, ರಾಜಕೀಯ ಬೆಳವಣಿಗೆ, ಹೋರಾಟಗಳ ವರದಿಯನ್ನು ಸಲ್ಲಿಸಿದರು. ಅದರ ಮೇಲೆ ಸುದೀರ್ಘ ಚರ್ಚೆ ನಡೆಯಿತು. ಡಿ.ಎಂ. ಖಲಾಸಿ, ಆರ್.ಕೆ. ಸಿರೂರ, ನ್ಯೂಟನಬಿಸಾಯ, ಎನ್. ಕೆ. ಉಪಾಧ್ಯಾಯ, ಭೀಮಸಿಕಲಾದಗಿ, ಕೂದಗಿ, ಕಾಲೇಬಾಗ ಮತ್ತು ವಿಠ್ಠಲ ಸಾಕ್ರಿಯವರ ಪ್ರಾದೇಶಿಕ ಸಮಿತಿ ಆರಿಸಲಾಯಿತು. ಈಗಿನ ಪರಿಸ್ಥಿತಿಯಲ್ಲಿ ಪಾರ್ಟಿಯ ಸಂಘಟನೆಯ ಮಹತ್ವವನ್ನು ರಾಮಚಂದ್ರರಾವ್ ಮತ್ತು ಹಸನ್‌ಖಾನ್ ಅವರು ಒತ್ತಿ ಹೇಳಿದರು. ಪ್ರಾರಂಭದಲ್ಲಿ ಕಾಂ. ಬಾಲಸುಬ್ರಮಣ್ಯಂ, ಭೂಪೇಶಗುಪ್ತಾ, ಡಾ. ಜಿ. ಅಧಿಕಾರಿ, ಎ. ಕೆ. ನಾರಾಯಣ್ ಮೊದಲಾದ ಮುಖಂಡರ ಅಕಾಲಿಕ ಮರಣಕ್ಕೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

●

ಗುಡಿಸಲು ನಿವಾಸಿಗಳ ಹೋರಾಟ

ರಾಣಿಬೆನ್ನೂರಿನಲ್ಲಿ ಗುಡಿಸಲು ನಿವಾಸಿಗಳು ಬೆಂಚುಮರಡಿಯ ನಿವೇಶನದಲ್ಲಿ ಗುಡಿಸಲು ಕಟ್ಟಿಕೊಂಡಿದ್ದರು. 10 ತಿಂಗಳ ಕೆಳಗೆ ಮುನಸಿಪಲ್ ಚೀಫ್ ಆಫೀಸರರ ನೇತೃತ್ವದಲ್ಲಿ ಗುಡಿಸಲುಗಳನ್ನು ನೆಲಸಮ ಮಾಡಲಾಗಿತ್ತು. ಈ ಅಕ್ರಮ ಪ್ರತಿಭಟಿಸಿ ಆಗ ಗುಡಿಸಲು ನಿವಾಸಿಗಳು ನಿವೇಶನಕ್ಕಾಗಿ ಸತ್ಯಾಗ್ರಹ ನಡೆಸಿದ್ದರು. ಸ್ಥಳಕ್ಕೆ ಆಗಮಿಸಿದ್ದ ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ, ಸ್ಥಳೀಯ ಶಾಸಕ ಇವರೆಲ್ಲ ಸೇರಿ ಗುಡಿಸಲು ಕಟ್ಟಿಕೊಳ್ಳುವಂತೆ, ತಿಳಿಸಿ ಹಕ್ಕುಪತ್ರ, ನೀರು, ಲೈಟು ಒದಗಿಸುವ ಭರವಸೆ ನೀಡಿದ್ದರು.

ಹತ್ತು ತಿಂಗಳು ಕಳೆದರೂ ಆಶ್ವಾಸನೆ ಕಾರ್ಯಗತವಾಗದಿರುವ ಕುರಿತು ಗುಡಿಸಲು ವಾಸಿಗಳು ಪ್ರತಿಭಟಿಸಲು ಸಿದ್ಧರಾಗಿದ್ದಾರೆ: 10-11-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ವಿ. ಎನ್. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಗುಡಿಸಲು ನಿವಾಸಿಗಳು ಸಭೆ ಸೇರಿ ಹೋರಾಟ ಪ್ರಾರಂಭಿಸಲು ನಿರ್ಧರಿಸಿದ್ದಾರೆ. 18-11-81ರಂದು ನೇಕಾರ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ. ಎಸ್. ಎಫ್. ಕ್ಯಾದಗಿ ಮತ್ತು ನಿಂಗರಡ್ಡಿ ಕೆಂಚರಡ್ಡೇರ ಇವರುಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ, ಅಸಿಸ್ಟೆಂಟ್ ಕಮೀಷನರರಿಗೆ ಮನವಿ ಸಲ್ಲಿಸಿರುವರು. 10-11-81ರ ಸಭೆಯಲ್ಲಿ ತಮ್ಮ ಸಂಘಕ್ಕೆ ಎ.ಕೆ.ಜಿ. ಗುಡಿಸಲು ನಿವಾಸಿಗಳ ಸಂಘವೆಂದೂ, ಗುಡಿಸಲು ನಿವಾಸಿಗಳ ನಿವೇಶನಕ್ಕೆ ಎ.ಕೆ.ಜಿ. ಕಾಲೋನಿ ಎಂದೂ ನಾಮಕರಣ ಮಾಡಿದ್ದಾರೆ.

○

ಎಸ್.ಎಫ್.ಐ. ಸಭೆ

ದ. ಕ. ಜಿಲ್ಲೆಯ ಉಪ್ಪಿನಂಗಡಿ ಸರಕಾರಿ ಜ್ಯೂನಿಯರ್ ಕಾಲೇಜ್‌ಗೆ ಪ್ರಿನ್ಸಿಪಾಲರು ಇಲ್ಲದೇ ಒಂದು ವರ್ಷವಾಗಿದೆ. ಕನ್ನಡ ಉಪನ್ಯಾಸಕರ ನೇಮಕವಾಗಿಲ್ಲ. ಕಳೆದ ಸೆಪ್ಟೆಂಬರ್ 16ರಂದು ವಿದ್ಯಾರ್ಥಿಗಳು ತಮ್ಮ ಕುಂದುಕೊರತೆಗಳ ಕುರಿತು. ಉಪನ್ಯಾಸಕರ ನೇಮಕವಾಗದಿರುವದರ ಕುರಿತು ಬೇಡಿಕೆ ದಿನ ಆಚರಿಸಿದ್ದರು. ಈ ಕೂಗು ಸರಕಾರಕ್ಕೆ ಇನ್ನೂ ಮುಟ್ಟಿಲ್ಲ.

21-11-81ರಂದು ಕಾಲೇಜ್‌ನ ಎಸ್.ಎಫ್.ಐ. ಘಟಕವು ಸಭೆ ಸೇರಿ ಕೂಡಲೇ ತಮ್ಮ ಬೇಡಿಕೆಗಳ ಬಗ್ಗೆ ಗಮನ ಹರಿಸದಿದ್ದರೆ "ಸರದಿ ಉಪವಾಸ ಸತ್ಯಾಗ್ರಹ" ಹೂಡುವುದಾಗಿ ತಿಳಿಸಿದ್ದಾರೆ. ಎಸ್.ಎಫ್.ಐ. ಘಟಕದ ಅಧ್ಯಕ್ಷ ಕಾಂ. ನಸೀರ್ ಅಹ್ಮದ್ ಅವರು ತಮ್ಮ ಹೋರಾಟಕ್ಕೆ ಸಾರ್ವಜನಿಕರ ಬೆಂಬಲ ಕೋರಿದ್ದಾರೆ.

○

ಸಚಿವ ಸಂಪುಟ ಸಭೆ ವಿರೋಧಿಸಿ

ಮೈಸೂರಿನಲ್ಲಿ ಮೆರವಣಿಗೆ

27-11-81ರಂದು ಮೈಸೂರಿನಲ್ಲಿ ನಡೆದ ಗುಂಡೂರಾಯರ ಸಚಿವ ಸಂಪುಟ ಸಭೆಯನ್ನು ವಿರೋಧಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ಜಂಟೀ ಆಶ್ರಯದಲ್ಲಿ ಮೈಸೂರು ನಗರದ ಮುಖ್ಯ ರಸ್ತೆಗಳಲ್ಲಿ ಘೋಷಣೆ ಕೂಗುತ್ತಾ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

"ಸಂಚಾರಿ ನಾಟಕ ಮಂಡಳಿ ಗುಂಡೂರಾಯರ ಸರಕಾರಕ್ಕೆ ಧಿಕ್ಕಾರ, ಜನಸಾಮಾನ್ಯರ ಹಣವನ್ನು ವ್ಯರ್ಥ ಪೋಲುಮಾಡುವ ಸರಕಾರದ ನೀತಿಗೆ ಧಿಕ್ಕಾರ, ಗೋಕಾಕ್ ಆಯೋಗದ ವರದಿಯನ್ನು ಜಾರಿಗೆ ತನ್ನಿ, ಪಡಿತರ ಪದ್ಧತಿ ವ್ಯವಸ್ಥಿತವಾಗಿ ಜಾರಿಯಾಗಲಿ, ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ಕೂಡಲೇ ಚುನಾವಣೆ ನಡೆಯಲಿ" ಇವೇ ಮೊದಲಾದ ಘೋಷಣೆ ನಗರದ ಜನರ ಗಮನ ಸೆಳೆಯಿತು.

ಪ್ರತಿಭಟನಾ ಮೆರವಣಿಗೆಯನ್ನು ಹಾರ್ಡಿಂಗ್ ಸರ್ಕಲ್ ಬಳಿ ತಡೆಯಲಾದ ಕಾರಣ ಅಲ್ಲೇ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾಸಮಿತಿ ಕಾರ್ಯದರ್ಶಿ ಕಾಂ. ಎಂ. ಎನ್. ಉಗ್ರಪ್ಪನವರು ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಸೋಮಸುಂದರ್ ಶರ್ಮರವರು ಗುಂಡೂರಾಯರ ಜನವಿರೋಧಿ ಹಾಗೂ ದುರುದ್ದೇಶದ ಆಡಳಿತ ವೈಖರಿಯ ವಿರುದ್ಧ ಪ್ರಬಲವಾದ ಜನಾಭಿಪ್ರಾಯವನ್ನು ರೂಪಿಸಬೇಕೆಂದು ಕರೆ ನೀಡಿದರು. ಮೈಸೂರು ಮತ್ತು ಮಂಡ್ಯ ಎರಡೂ ಜಿಲ್ಲೆಗೆ ಒಂದೇ ನಗರಸಭೆಯನ್ನು ರಚಿಸುವ ಸರಕಾರದ ಯೋಜನೆಯನ್ನು ತೀವ್ರವಾಗಿ ಸಭೆಯಲ್ಲಿ ಖಂಡಿಸಲಾಯಿತು.

ಇದೇ ದಿನದಂದು ಸ್ಥಳೀಯ ಕಾಂಗ್ರೆಸ್ (ಎಸ್) ಹಾಗೂ ಜನತಾ ಚಳುವಳಿಯ ಕಾರ್ಯಕರ್ತರೂ ಪ್ರತಿಭಟನಾ ಮೆರವಣಿಗೆ ನಡೆಸಿ ಬಂಧನಕ್ಕೆ ಒಳಗಾದರು.

●

ಒಪ್ಪಂದ

ಹಾಸನ ಜಿಲ್ಲೆಯ ಬೇಲೂರಿನಲ್ಲಿರುವ ಶ್ರೀ ಲಕ್ಷ್ಮೀ ಸಾ ಮಿಲ್‌ನ ಕಾರ್ಮಿಕರ ಕೆಲವು ಬೇಡಿಕೆಗಳ ಕುರಿತು ಒಪ್ಪಂದಕ್ಕೆ ಬರಲಾಗಿದೆ. 19-11-81ರಂದು ಆಡಳಿತವರ್ಗ ಮತ್ತು ಕಾರ್ಮಿಕ ಸಂಘ (ಕಾಫೀ ಕ್ಯೂರಿಂಗ್ ಮತ್ತು ಇತರ ಕಾರ್ಮಿಕ ಸಂಘ)ಗಳ ಪ್ರತಿನಿಧಿಗಳ ನಡುವೆ ದೀರ್ಘ ಮಾತುಕತೆ ನಡೆದು ಒಪ್ಪಂದಕ್ಕೆ ಅಂಕಿತ ಹಾಕಲಾಗಿದೆ. ಈ ಒಪ್ಪಂದದಿಂದಾಗಿ ಲಕ್ಷ್ಮೀ ಸಾ ಮಿಲ್‌ನ ಪ್ರತಿ ಕಾರ್ಮಿಕನಿಗೆ ಸುಮಾರು 50ರೂ. ಗಳಷ್ಟು ವೇತನದಲ್ಲಿ ಹೆಚ್ಚಳವಾಗಿದೆ. ಒಪ್ಪಂದಕ್ಕೆ ಕಾರ್ಮಿಕ ಸಂಘದ ಪರವಾಗಿ ಕಾಂ. ಎ. ಸಿ. ಕೇಶವ್ ಮತ್ತು ಎ.ಕೆ. ವಿಶ್ವನಾಥ ಮೊದಲಾದವರು ಅಂಕಿತ ಹಾಕಿದ್ದಾರೆ.

○



ನವೆಂಬರ್ 3ರಂದು ಸುಳ್ಯದಲ್ಲಿ ರೈತಸಂಘದ ನೇತೃತ್ವದಲ್ಲಿ ತಾಲ್ಲೂಕು ಕಛೇರಿ ಎದುರು ಭೂ ನ್ಯಾಯಮಂಡಳಿಗಳ ಭ್ರಷ್ಟಾಚಾರದ ವಿರುದ್ಧ ನಡೆಸಿದ ಪ್ರತಿಭಟನೆಯ ದೃಶ್ಯ.

ಮುಂಬೈ ಸೂಳೆಗೇರಿಗೆ ತರುಣಿಯರ ಸಾಗಾಟ

ಮಂತ್ರಿಮಾನ್ಯರುಗಳ ಕೈವಾಡ!

ದ. ಕ. ಜಿಲ್ಲೆಯೂ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ತರುಣಿಯರನ್ನು ಮುಂಬೈಗೆ ಸೂಳೆಗಾರಿಕೆಗಾಗಿ ಸಾಗಿಸಿ ಅಪಾರ ಹಣ ಸಂಪಾದನೆ ಮಾಡುವ ಪ್ರತಿಷ್ಠಿತ ವ್ಯಕ್ತಿಗಳ ಕಾರಸ್ಥಾನವನ್ನು ಬಯಲು ಮಾಡಿದ ವರದಿ ಇತ್ತೀಚೆಗೆ ಕನ್ನಡಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಎಂದೋ ಬಯಲಾಗಬೇಕಾಗಿದ್ದ ಸುದ್ದಿ ತಡವಾಗಿಯಾದರೂ ಜನತೆಯ ಅರಿವಿಗೆ ಬಂದದ್ದು ಸಂತೋಷದ ವಿಚಾರ. ಮುಗ್ಧ, ಬಡ ಹೆಣ್ಣು ಮಕ್ಕಳ ಮಾನವನ್ನು ಮಾರಾಟ ಮಾಡಿ ಹಣ ಸಂಪಾದಿಸಿ ಬಂಗಲೆ ಕಟ್ಟಿಸಿ ಸುಖ ಜೀವನ ನಡೆಸುತ್ತಿರುವ ಮಾನವಂತರ ಕೆಲಸ ಕಾರ್ಯಗಳು ಇದುವರೆಗೆ ಗುಸುಗುಸು ಸುದ್ದಿಯಾಗಿತ್ತು. (ಉಡುಪಿ, ಕುಂದಾಪುರದ ಆಸುಪಾಸಿನ ಜನಗಳು ಇನ್ನಾದರೂ ಬಾಯಿಬಿಟ್ಟು ಈ ಬಗ್ಗೆ ಹೆಚ್ಚಿನ ವಿವರ ನೀಡಲು ಮುಂದಾಗಬೇಕು) ಈಗ ಮುಗ್ಧ ಹೆಣ್ಣು ಮಕ್ಕಳ ಕಣ್ಣೀರ ಕಥೆ ಬಯಲಾಗಿದೆ. ಈಗಲಾದರೂ ಈ ಅನಿಷ್ಟ ಜಾಲದ ವಿರುದ್ಧ ಹೋರಾಡಲು ನಮ್ಮ ಜನ ಅದರಲ್ಲೂ ವಿಶೇಷವಾಗಿ ಸುಸಂಸ್ಕೃತರು ಹಾಗು ಮಹಾ ಬುದ್ಧಿವಂತ ಜನಗಳೆಂದು ಬೆನ್ನು ತಟ್ಟಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನ ತಯಾರಾಗಬೇಕಾಗಿದೆ.

ಸೂಳೆಗಾರಿಕೆ ಸಮಾಜದ ಅಧಃಪತನಕ್ಕೆ ಹಿಡಿದ ಕನ್ನಡಿ. ಆರ್ಥಿಕ, ಸಾಮಾಜಿಕ ಅಸಮಾನತೆ, ಕಿತ್ತು ತಿನ್ನುವ ಬಡತನದಿಂದಾಗಿ ಬಹುಪಾಲು ಜನಸಮುದಾಯ ಬೆರಳೆಣಿಕೆಯ ಜನವರ್ಗದ ಸುಖಲೋಲುಪ್ತತೆಯ ಮತ್ತಿಗಾಗಿ ತಮ್ಮ ತನುಮನವನ್ನು ಮಾರಾಟ ಮಾಡಬೇಕಾದ ದುಃಸ್ಥಿತಿ ಇಂದು ಒದಗಿ ಬಂದಿದೆ. ವರದಕ್ಷಿಣೆ, ನಿರುದ್ಯೋಗದಂತಹ ಸಾಮಾಜಿಕ ಪಿಡುಗುಗಳೂ ಇದಕ್ಕೆ ಪೋಷಣೆ ಕೊಡುತ್ತಿದೆ. ಇದರ ದುರುಪಯೋಗ ಮಾಡಿ ಹಣ ಸಂಪಾದಿಸುವ ಜನಗಳು ನಮ್ಮ ಬಡ ತರುಣಿಯರ ಮಾನವನ್ನು ಖರೀದಿಸುತ್ತಾರೆ. ಮಾರುತ್ತಾರೆ!

ಮುಂಬೈಯಂತಹ ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತದ ಸ್ತ್ರೀಯ ಮಾನವೂ ಸುಲಭ ಬೆಲೆಗೆ ಸಿಗುವ ಮಾರಾಟದ ವಸ್ತುವಾಗಿದೆ. ಮುಂಬೈಯ ಸೂಳೆಗೇರಿಗೆ ದ. ಕ. ಜಿಲ್ಲೆಯೂ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ತರುಣಿಯರ ಸಾಗಾಟ ನಿರಂತರವಾಗಿ, ನಿರಾತಂಕವಾಗಿ ನಡೆಯುತ್ತಿದೆ. ಈ ಚರ್ಮ ವ್ಯಾಪಾರದ ವ್ಯವಸ್ಥಿತ ಜಾಲವೇ ಕಾರ್ಯನಿರ್ವಹಿಸುತ್ತಿದೆ. ಹಣ ಮತ್ತು ಅಧಿಕಾರದ ಬೆಂಬಲ ಇವರ ಬೆಂಗಾವಲಿಗಿದೆ. ಮಂತ್ರಿ ಮಾನ್ಯರುಗಳ ಮತ್ತು ಕಾನೂನು ರಕ್ಷಕರೆಂದು ಕರೆಸಿಕೊಳ್ಳುತ್ತಿರುವವರ ಕೃಪಾಕಟಾಕ್ಷವೂ ಇವರುಗಳಿಗೆ ಧಾರಾಳವಾಗಿದೆ. ಈ ಎಲ್ಲಾ ಪ್ರತಿಷ್ಠಿತರ ಕಾರಸ್ಥಾನವನ್ನು ಬಯಲು ಮಾಡುವ ಸಮಯವಿದೀಗ ಬಂದಿದೆ.

ಬಡ ಹೆಣ್ಣು ಮಕ್ಕಳ ಮಾನ ಮಾರಾಟವಾಗುತ್ತಿರುವುದು ಮಹಿಳೆಯೊಬ್ಬಳು ದೇಶದ ಪ್ರಧಾನಿಯಾಗಿರುವ ಭಾರತದಲ್ಲಿ ಹಾಗು 'ಸಮರ್ಥ ಮೇಧಾವಿ' ಗುಂಡೂರಾಯರು ಗದ್ದುಗೆ ಹಿಡಿದು ಮುಖ್ಯಮಂತ್ರಿಯಾಗಿ ಮೆರೆಯುತ್ತಿರುವ ಕರ್ನಾಟಕದಲ್ಲಿ ಎನ್ನುವುದನ್ನು ನಾವು ವಿಶೇಷವಾಗಿ ಗಮನಿಸಬೇಕು.

ಹೆಣ್ಣಿನ ಮಾನ ಮಾರಾಟಮಾಡಿ ಅವಳ ಕಣ್ಣೀರಿನಲ್ಲಿ ಅಪಾರ ಹಣ ಸಂಪಾದಿಸಿದ ಎಲ್ಲಾ ಪ್ರತಿಷ್ಠಿತ ಜನರನ್ನು ಕಟಕಟೆಗೆ ಎಳೆದಂತಿರುವ ನಿಟ್ಟಿನಲ್ಲಿ ಜನಹೋರಾಟವನ್ನು ಸಂಘಟಿಸಬೇಕು. ಮುಗ್ಧ, ಬಡ ಹೆಣ್ಣು ಮಕ್ಕಳ ಕಣ್ಣೀರನ್ನು ಒರಸಿ ಅವರಿಗೆ ಹೊಸದಾರಿ, ಹೊಸಬಾಳು ತೋರಿಸಬೇಕಾಗಿದೆ. ಪ್ರಗತಿಪರ ಯುವಜನ, ಮಹಿಳಾ ಸಂಘಟನೆಗಳು ಈ ನಿಟ್ಟಿನಲ್ಲಿ ತುರ್ತಾಗಿ ಬೀದಿಗಿಳಿಯಬೇಕು.

—ಕುಮಾರ್ ಕುಂದಾಪುರ

ಚೆಲುವು ಸೂಸುವ ಕಥೆಗಳು

(2ನೇ ಪುಟದಿಂದ)

ಸರು) ದುರ್ಬಲರ ಬಗ್ಗೆ ತಳೆಯುವ ಸಾಧಾರಣ ಹಮ್ಮಿನ ಧೋರಣೆ ಕತೆಯು ತುಂಬಾ ಧ್ವನಿಸುತ್ತದೆ. ಸುಯುಮದಿಂದ ಕುಂತು ಓದಿದರೆ ಗಾಢ ಪರಿಣಾಮ ಬೀರಬಲ್ಲ ಕತೆ. ವಾಸ್ತವ ಚಿತ್ರವನ್ನು ಯಥಾವತ್ತಾಗಿ ಚಿತ್ರಿಸುವ ಸಾತಾ ಇನೇಕೋ ಕ್ರಾಂತಿಕಾರಿ ಸಾಹಿತಿಯ ಜವಾಬ್ದಾರಿ ಹೊತ್ತಿದ್ದಾರೆ.

ಕೊರಿಯಾದ ಕಥೆಗಳು

ಸಂಘಟಿತ ಔದ್ಯೋಗಿಕ ಕಾರ್ಮಿಕ ವರ್ಗವಿಲ್ಲದ, ರೈತರೇ ಹೆಚ್ಚಾಗಿದ್ದ ಕೊರಿಯ ಸಮಾಜವಾದೀ ಕ್ರಾಂತಿಯತ್ತ ಸಾಗಿ ಕಮ್ಯುನಿಸ್ಟ್ ವಿರೋಧಿ ಅಪಪ್ರಚಾರಕರನ್ನು ದಂಗುಬಡಿಸಿತು. ಕೊರಿಯಾದಲ್ಲಿ ಹೊಸ ಅಧ್ಯಾಯ ಆರಂಭವಾದದ್ದು 1932ರಲ್ಲಿ, ಕಿಮ್ ಇಲ್ ಸುಂಗ್‌ನ ನಾಯಕತ್ವದಲ್ಲಿ ಗೆರಿಲ್ಲಾ ದಳ ಸ್ಥಾಪನೆಯಾದಾಗ. ಉತ್ತರ ಕೊರಿಯನ್ನರು ಕಿಮ್ ಇಲ್ ಸುಂಗ್ ನಾಯಕತ್ವದಲ್ಲಿ ಕಾರ್ಮಿಕನ್ನು ಖರಾದರು. ಉತ್ತರ ಕೊರಿಯ ಸಮಾಜವಾದ ಸ್ಥಾಪನೆಯ ಕಾರ್ಯದಲ್ಲಿ ನಿರತವಾಯಿತು. ದಕ್ಷಿಣ ಕೊರಿಯಾ ಅಮೇರಿಕಾದ ಕೈವಾಡವಾಗಿ ಕೆಲಸ ಮಾಡಿತು. 1960ರಲ್ಲಿ ವಿದ್ಯಾರ್ಥಿಗಳು ಬಂಡಾಯವೆದ್ದಾಗ ಮಿಲಿಟರಿ ಅಧಿಕಾರಕ್ಕೆ ಬಂತು....

ಇಲ್ಲಿರುವ ಎರಡು ಕಥೆಗಳಲ್ಲಿ ಒಂದು ಕಥೆ ಉತ್ತರ ಕೊರಿಯಾದ ಸಮಾಜವಾದಿ ರಚನಾತ್ಮಕ ಕಾರ್ಯವನ್ನು ಆ ಜನತೆಯ involvement ನ್ನು ಸಮಗ್ರವಾಗಿ ಸೆರೆ ಹಿಡಿದರೆ, ಇನ್ನೊಂದು ಕಥೆ 'ಅಸ್ವಸ್ಥತೆ' ದಕ್ಷಿಣ ಕೊರಿಯಾದ ಅನಾರೋಗ್ಯಕರ ಅವ್ಯವಸ್ಥೆಯ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ.

ಎರಡೇ ಕಥೆಗಳು : ಉತ್ತರ ಕೊರಿಯಾದ ಜೀವನಕ್ಕೂ ದಕ್ಷಿಣ ಕೊರಿಯಾ ಜೀವನಕ್ಕೂ ಇರುವ ಅಂತರಕ್ಕೆ ಕಾರಣವಾಗಿರುವ ಸಮಾಜ ರಚನೆಯನ್ನು ಹೇಳುತ್ತದೆ.

ಒಟ್ಟಿನಲ್ಲಿ ಇಲ್ಲಿಯ ಎಲ್ಲ ಕಥೆಗಳೂ ಆ ದೇಶದ ಆರ್ಥಿಕ ಸಾಮಾಜಿಕ ರಚನೆಯು ಆ ದೇಶದ ಜನತೆಯನ್ನು ನಿಯಂತ್ರಿಸುತ್ತಿರುವ ಜೀವನದ ಅದರ ಎಲ್ಲ ಅರ್ಥಗಳೊಂದಿಗೆ ತುಂಬಾ ಕಲಾತ್ಮಕವಾಗಿ ಸೆರೆಹಿಡಿದ ಈ ಎಲ್ಲಾ ದೇಶಗಳ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚು ಮಾಡುತ್ತದೆ. ಚೆಲುವು ಸೂಸುತ್ತವೆ.

ಜಿ. ಎಸ್. ಸದಾಶಿವರ ಅನುವಾದ ಅತ್ಯುತ್ತಮವಾಗಿ ಬಂದಿದೆ. ಪ್ರಸ್ತಾವನೆ ಒದಗಿಸಿರುವ ಪ್ರಧಾನ ಸಂಪಾದಕ ನಿರಂಜನ, ನವಕರ್ನಾಟಕ ಸಂಸ್ಥೆಯವರೂ, ಕಾರ್ಯದರ್ಶಿ ರಾಜಾರಾವ್ ಅವರೂ ಒಟ್ಟಿನಲ್ಲಿ ವಿಶ್ವಕಥಾ ಕೋಶ ಯೋಜನೆಯಲ್ಲಿ ಕೈಗೂಡಿಸಿದವರೆಲ್ಲ ಅಭಿನಂದನೆಗೆ ಪಾತ್ರರಾಗದೇ ಇರರು.

●

ಸಮ್ಮೇಳನದ ಯಶಸ್ಸಿಗೆ ಕರೆ

ಎಸ್. ಕೆ. ಪೀವರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯೊಂದು ತಾ. 23-11-81ರಂದು ಶ್ರೀ ಕೆ. ಪೂವಪ್ಪ ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಡಿಸೆಂಬರ್ ತಾ. 11ರಿಂದ 14ರವರೆಗೆ ಮಂಗಳೂರಿನಲ್ಲಿ ಜರಗುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸರ್ವರೀತಿಯ ಸಹಾಯ ಮತ್ತು ಸಹಕಾರ ನೀಡಬೇಕೆಂದು ನೈಗೆ ಕೆಲಸಗಾರರಿಗೆ ಕರೆ ನೀಡಲಾಯಿತು. ಜಿಲ್ಲಾ ಸಿ. ಐ. ಟಿ. ಯು. ಉಪಾಧ್ಯಕ್ಷರಾದ ಶ್ರೀ ಬಿ. ಮಾಧವ ಅವರು ಕಾರ್ಮಿಕರ ರಾಜಕೀಯ ಕರ್ತವ್ಯಗಳನ್ನು ವಿವರಿಸಿದರು.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಬಳ್ಳಾರಿ ಜಿಲ್ಲಾ ಚಟುವಟಿಕೆಗಳು

ಬಳ್ಳಾರಿ ಜಿಲ್ಲಾ ಬಂಡಾಯ ಕವಿ ಸಮ್ಮೇಳನ

ಬಳ್ಳಾರಿ ಜಿಲ್ಲಾ ಬಂಡಾಯ ಕವಿ ಸಮ್ಮೇಳನವು ತಾ. 7-11-81ರಂದು ಹೂವಿನ ಹಡಗಲಿಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಎಲ್. ಹನುಮಂತಯ್ಯನವರು (ದ. ಸಂ. ಸ. ರಾಜ್ಯಸಮಿತಿ ಸದಸ್ಯರು, ಬೆಂಗಳೂರು ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರು) ಮಾತನಾಡುತ್ತ "ಸಾಹಿತ್ಯ ಹುಟ್ಟಿದಂದಿನಿಂದ ಬಂಡಾಯದ ಅಂಶಗಳಿದ್ದೇ ಇದೆ. ಆಗಿನ ಕಾಲಕ್ಕೆ ಸಾಹಿತ್ಯ ಕೆಲವರ್ಗಗಳ ಹಿಡಿತದಲ್ಲಿತ್ತು. ಆದರೆ ಸಾಹಿತ್ಯ ಜನಪರವಾಗಬೇಕು ಎಂದು ಎದ್ದಿರುವ ಇಂದಿನ ಕೂಗು ಆರೋಗ್ಯಕರವಾದದ್ದು. ಇಂದಿನ ಎಡ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲ ಬಂಡಾಯದ ಧೋರಣೆ ಅಭಿವ್ಯಕ್ತಿಸುತ್ತಿವೆ. ಚಳುವಳಿಯ ಹಾಡು ಬಂಡಾಯ ಕವಿತೆಯಾಗಿದೆ. ಬಂಡಾಯ ಗುರಿಪುಗಾರಿಕೆ ಅಲ್ಲ. ಹಿಂದಿನ ಕಾಲದಲ್ಲೂ ಬಂಡಾಯದ ಎಳೆ ಇದ್ದರೂ ಗುರುತಿಸಲಾರದ ಮಟ್ಟಕ್ಕಿತ್ತು. ಆದರೆ ಇವತ್ತು ಸಂಘಟನಾರೂಪವಾಗಿ ಬರುತ್ತಿದೆ. ಹಿಂದೂ ಧರ್ಮವ ಕೊಂದರು ದಲಿತರು-ಜಮೀನುದಾರರ ಬಿಡಲಿಲ್ಲ ಎನ್ನುವ ವಾಕ್ಯಗಳು ಕವಿಯಿಂದ ಬರುತ್ತಿರಬೇಕಾದರೆ ಕವಿಯ ನಿಖರವಾದ, ಸ್ಪಷ್ಟವಾದ, ಸರಿಯಾದ, ತೀಕ್ಷ್ಣವಾದ ರಾಜಕೀಯ ನಿಲುವು ಬಹುಮುಖ್ಯ. ಕೊಳೆತು ನಾರುತ್ತಿರುವ ಸಂಸ್ಕೃತಿಯ ವಿರುದ್ಧ ಸ್ಪಷ್ಟವಾದ ರಾಜಕೀಯ ನಿಲುವು ಎಲ್ಲ ಸಾಹಿತಿಗಳಿಗೂ ಬೇಕು. ಎಲ್ಲಾ ಪ್ರಗತಿಪರ ಆಲೋಚನೆಗಳುಳ್ಳವರ ಕಳಕಳಿಯ ಬೆಂಬಲದೊಂದಿಗೆ ಬಂಡಾಯ ಚಳುವಳಿ ಬೃಹತ್ತಾಗಿ ಬೆಳೆಯಬೇಕಾಗಿದೆ" ಎಂದರು. ಪ್ರಾರಂಭದಲ್ಲಿ ಎಸ್. ಎಸ್. ಹಿರೇಮಠ, ಕುಂ. ವೀರಭದ್ರಪ್ಪ, ಎಸ್. ವೈ. ಗುರುಶಾಂತಪ್ಪ, ಪರಶುರಾಮ ಕಲಾಲ, ಗಿರಿಧರರಾವ್, ಶೇಷಗಿರಿ, ಡಾ. ಕೊಟ್ರೇಶಿ ಆಲೂರು, ಗುಂಡಿಹಳ್ಳಿ ನಾಗರಾಜ, ನಾಗರಾಜಹೊಸಪೇಟೆ ಮುಂತಾದ ಇಪತ್ತೈದುಜನ ಕವಿತೆ ಓದಿದರು. ಅಧ್ಯಕ್ಷತೆವಹಿಸಿದ್ದ ಶ್ರೀ ಎಂ. ಪಿ. ಪ್ರಕಾಶ್ (ಸಮಾಜವಾದಿ ವಕೀಲರು) ಮಾತನಾಡುತ್ತ "ಮನುಷ್ಯ ಹುಟ್ಟುಹೋರಾಟಗಾರ ಆದರೆ ಪುರೋಹಿತಶಾಹಿಯಿಂದ ಬಲಿಪಶುವಾಗಿದ್ದಾನೆ. ಯಾವುದೇ ಜಿಡ್ಡುಗಟ್ಟಿದ ಪರಿಸರದ ವಿರುದ್ಧ ನಿಟ್ಟುಸಿರುಬಿಡುವುದೇ ಬಂಡಾಯ. ಹಳ್ಳಿಗರತಕ್ಕಂತಹ ಸಾಹಿತ್ಯದಲ್ಲಿ ಹೋರಾಟ ರೂಪಿಸಿಕೊಳ್ಳತಕ್ಕಂತಹ ಅಗತ್ಯ ಬಂಡಾಯಕ್ಕಿದೆ" ಎಂದರು.

ಬಂಡಾಯ ನಿಲುವನ್ನು ಸ್ಪಷ್ಟವಾಗಿ ಅಭಿಮಾನಿಗಳ ಗಮನಕ್ಕೆ ತಂದವರು ಸ್ವಾಗತಮಾಡಿದ ಡಿ. ಉಲ್ಲಾಸ್ ಹಾಗೂ ವಂದಿಸಿದ ಗುಂಡಿಹಳ್ಳಿ ನಾಗರಾಜ ಅವರುಗಳು. ●

ದಲಿತ ಸಂಘರ್ಷ ಸಮಿತಿಗೆ ನಾಂದಿ

"ಸಿಟ್ಟನ್ನು ತಾಯಿಯ ಮೊಲೆ ಹಾಲನ್ನು, ಹೆಣದ ಸುತ್ತಲಿನ ದುಃಖವನ್ನು ಉದ್ಘಾಟಿಸಲು ಸಾಧ್ಯವಿಲ್ಲ. ಅಂತೆಯೇ ದಲಿತ ಸಂಘರ್ಷ ಸಮಿತಿಯನ್ನೂ ಉದ್ಘಾಟಿಸಲು ಸಾಧ್ಯವಿಲ್ಲ" ಎಂದ ಸಾಹಿತಿ ಕುಂ. ವೀರಭದ್ರಪ್ಪನವರು 8-11-81ರಂದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ದ. ಸಂ. ಸ. ಪ್ರಾರಂಭಕ್ಕೆ ನಾಂದಿ ಹಾಕಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಲ್. ಹನುಮಂತಯ್ಯನವರು ಮಾತನಾಡುತ್ತಾ "ಸಿಟ್ಟು ಸಂಸ್ಕೃತಿಗೆ ಕೊಟ್ಟ ಮೊಟ್ಟಮೊದಲ ವಿಟು ಅಂಬೇಡ್ಕರ್. ಈ ದೇಶದಲ್ಲಿ ದಲಿತರ ಸ್ಥಿತಿ ಅಂಬೇಡ್ಕರ್ ಕಾಲದಲ್ಲಿ ಇದ್ದ ಹಾಗೇ ಇದೆ. ಅಂಬೇಡ್ಕರ್ ಹೇಳಿದ್ದು : ಜನರನ್ನು ಸಂಘಟಿಸಬೇಕು-ಹೋರಾಟ ಮಾಡ್ಬೇಕು ಎಂದು. ಇಂದು ಸಂಘಟನೆಯ ಅನಿವಾರ್ಯತೆ ಎಲ್ಲೆಡೆಗೂ ಭುಗಿಲೆದ್ದು ಏಳುತ್ತಿದೆ. ಬಿರ್ಲಾನ ಮಂದಿರದ ಪೂಜಾರಿಗಳೂ ಸಂಘಟಿತರಾಗುತ್ತಿದ್ದಾರೆ. ದಲಿತರು ವಿಮೋಚನೆಯ ಮುಂಚೂಣಿಯಲ್ಲಿರಬೇಕು ನಿಜ; ಆದರೆ ದಲಿತರ ವಿಮೋಚನೆ ಪ್ರತ್ಯೇಕವಾಗಿ ಇರುವುದಿಲ್ಲ. ಒಟ್ಟು ಸಮಾಜದ ಶೋಷಿತರ ವಿಮೋಚನೆಯೊಂದಿಗೇ ದಲಿತರ ವಿಮೋಚನೆಯಾಗಬೇಕಿದೆ" ಎಂದರು.

ಭಾಷಣಕಾರರಾಗಿ ಆಗಮಿಸಿದ್ದ ಎಸ್. ಎಸ್. ಹಿರೇಮಠ ಮಾತನಾಡುತ್ತಾ "ಮನುಷ್ಯತನ್ನೇ ಸುಟ್ಟುಬಿಡುವ ಈ ದೇಶದಲ್ಲಿ ತುರ್ತಾಗಿ ಆಗ

(ಕಡೇ ಪುಟನೋಡಿ)

ಸಾಮೂಹಿಕ ಕ್ರಾಂತಿಕಾರೀ ಪಕ್ಷ ಕಟ್ಟುವಲ್ಲಿನ ಸಮಸ್ಯೆಗಳು

(1ನೇ ಪುಟದಿಂದ)

ರಾಜಕೀಯ ಹಾಗೂ ಕಾರ್ಯತಂತ್ರದ ನೀತಿಗಳನ್ನು ಬಿಡಬೇಕಾಗಿತ್ತು.

ತುರ್ತುಪರಿಸ್ಥಿತಿ ವಿರೋಧೀ ಅಲೆ ನಾವು 'ಮಹಾಮೈತ್ರಿಕೂಟ'ದ ಪಕ್ಷಗಳು ರಚಿಸಿಕೊಂಡ ಜನತಾಪಕ್ಷದೊಡಗೂಡಿ ಪ್ರಚಾರಕ್ಕಿಳಿಯುವಂತೆ ಮಾಡಿ ನಮ್ಮ ತಪ್ಪು ದಾರಿಯನ್ನು ಸರಿಪಡಿಸಿಕೊಳ್ಳುವಲ್ಲಿ ಸಹಾಯಕವಾಯಿತು.

II

ಸಾಲ್ಕಿಯಾ ಪ್ಲೀನಮ್ ನಿರ್ಣಯ 1973ರ ಕೇಂದ್ರಸಮಿತಿಯ ಠರಾವುನಲ್ಲಿ ಅಂಗೀಕರಿಸಿದ ತಪ್ಪು ನೀತಿಯನ್ನು ಪರಿಶೀಲಿಸಿತು. ಇದಕ್ಕಿಂತ ಮೊದಲು 1968ರಲ್ಲಿ ಕೇಂದ್ರಸಮಿತಿ "ಪಾರ್ಟಿ ಸಂಘಟನೆಯ ಕಾರ್ಯ", "ಟ್ರೇಡ್ ಯೂನಿಯನ್ ರಂಗದ ಕಾರ್ಯ" ಮತ್ತು "ಕಿಸಾನ್ ರಂಗದ ಕಾರ್ಯ" ಎಂಬ ಮೂರು ದಾಖಲೆಗಳನ್ನು ಅಂಗೀಕರಿಸಿತ್ತು. ಪಾರ್ಟಿಯ ಸಂಘಟನೆಯ ಬಗೆಗಿನ ದಾಖಲೆಯಲ್ಲಿ ಮಂಡಿಸಿದ ವಿಚಾರಗಳು ಸರಿಯಾಗಿಯೇ ಇದ್ದವು. ಆದರೆ 1973 ರಲ್ಲಿ ಕೇಂದ್ರಸಮಿತಿ "ಪಾರ್ಟಿ ಸಂಘಟನೆಯಲ್ಲಿ ತುರ್ತಿನ ಕರ್ತವ್ಯಗಳು" ಎಂಬ ದಾಖಲೆಯನ್ನು ಅಂಗೀಕರಿಸಿತು. ಕಿಸಾನ್ ರಂಗದ ಕೆಲಸಗಳಿಗೆ ಅನುಕೂಲವಾಗುವ ರೀತಿಯ ಪಾರ್ಟಿ ಸಂಘಟನೆ ಕಟ್ಟಬೇಕೆಂದು ಇದರಲ್ಲಿ ಸೂಚಿಸಲಾಯಿತು. ಈ ದಾಖಲೆಯಲ್ಲಿ ಪಾರ್ಟಿ ಸಂಘಟನೆಯನ್ನು ಪಾರ್ಟಿಯ ನೆಲೆಗಳು ಎಂದು ಕರೆಯಲಾದ ಪ್ರದೇಶಗಳಲ್ಲಿ ಕಟ್ಟಿ ಬೆಳೆಸಿ, ಭದ್ರಪಡಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು. ಇದಕ್ಕನುಸಾರವಾಗಿ ಕರ್ನಾಟಕದಲ್ಲಿ ಸಹ, ರಾಜ್ಯಾದ್ಯಂತ ಹರಡಿಸಲು ಯತ್ನಿಸದೆ ಕೆಲವು ಪ್ರದೇಶಗಳಲ್ಲಿ ಮಾತ್ರ ಪಕ್ಷದ ನೆಲೆ ಭದ್ರಪಡಿಸುವ ನೀತಿ ಅನುಸರಿಸಲಾಯಿತು. ಈ ನೀತಿ ಅನುಸರಣೆ ನಮ್ಮ ರಾಜ್ಯದಲ್ಲಿ ಎಷ್ಟು ಅನಾಹುತ ಮಾಡಿದೆ ಎಂದು ನಮಗೆ ಅನುಭವ ಇದೆ. ಪಕ್ಷದ ಹತ್ತನೇಯ ಅಧಿವೇಶನದ ಸಮಯಕ್ಕೆ ಕೇಂದ್ರಸಮಿತಿ ಈ ಗಂಭೀರವಾದ ತಪ್ಪನ್ನು ಸರಿಪಡಿಸಿದಾಗ ಮೇಲೆಯೇ ನಮ್ಮ ರಾಜ್ಯದಲ್ಲಿ ಈ ಹಳೆಯ ನೀತಿಯನ್ನು ಬಿಟ್ಟುಕೊಡಲಾಯಿತು. ಹೊಸ ಮತ್ತು ಸರಿಯಾದ ನೀತಿ ನಮ್ಮ ರಾಜ್ಯದಲ್ಲಿ ಪಕ್ಷವನ್ನು ಬೆಳೆಸುವ ಕಾರ್ಯದಲ್ಲಿ ಬಹಳ ಸಹಕಾರಿಯಾಗಿದೆ. ಇದರಿಂದಾಗಿ ತುರ್ತು ಪರಿಸ್ಥಿತಿಯ ನಂತರ ರಾಜ್ಯದ ತುಂಬೆಲ್ಲಾ ನಡೆದ ವಿವಿಧ ಜನ ಹೋರಾಟಗಳಲ್ಲಿ (ರೈತ ಹೋರಾಟ ಮುಂತಾದವು) ಸಕ್ರಿಯವಾಗಿ ಭಾಗವಹಿಸಲು ಮತ್ತೆ ಪ್ರವೇಶಿಸಲು ಪಕ್ಷವನ್ನು ವ್ಯಾಪಕವಾಗಿಸುವ ನೀತಿ ಸಹಕಾರಿಯಾಯಿತು.

ಈ ಹೊಸ ಸಂಘಟನಾ ಪರಿಕಲ್ಪನೆಯಿಂದ ನೇರವಾಗಿ ಮೂಡುವ ಹಲವು ನಿರ್ಧಾರಗಳನ್ನು ಸಾಲ್ಕಿಯಾ ಪ್ಲೀನಮ್ ಕೈಗೊಂಡಿತು. ಒಂದು ಕಮ್ಯುನಿಸ್ಟ್ ಪಕ್ಷವನ್ನು ಒಂದು ಕೇಂದ್ರದಿಂದ ಮಾತ್ರ ಕಟ್ಟಲು ಸಾಧ್ಯ ಎಂದು ನಿರ್ಧರಿಸಲಾಯಿತು. ಪಾರ್ಟಿ ಕೇಂದ್ರದಿಂದ ಕಾರ್ಯ ನಿರ್ವಹಿಸುವ ಮತ್ತು ಸ್ಥಳೀಯ ಜವಾಬ್ದಾರಿಗಳಿಂದ ಮುಕ್ತವಾದ ಪೊಲಿಟ್‌ಬ್ಯೂರೋ ನಾಯಕತ್ವ ವಿಕಬೇಕೆಂದು ನಿರ್ಧರಿಸಲಾಯಿತು. ಸಂಘಟನಾ ಕೆಲಸಗಳ ವಿಭಜನೆ/ವಿತರಣೆ; ತನ್ನ ಕೆಲಸದ ಬಗ್ಗೆ ವರದಿ ಒಪ್ಪಿಸುವುದು, ಇಂತಹ ಕೆಲಸಗಳ ಬಗ್ಗೆ ಸಾಮೂಹಿಕ ವಿಮರ್ಶೆ ಇವೆಲ್ಲಾ ಸರಿಯಾದ ಸಂಘಟನಾ ನೀತಿ ಎಂದು ಅಲ್ಲಿ ನಿಶ್ಚಯಿಸಲಾಯಿತು. ಪಕ್ಷದ ಸೈದ್ಧಾಂತಿಕ ದುರ್ಬಲತೆಯನ್ನು ದೂರ ಮಾಡುವುದು, ಎರಡೂ ಕಡೆ ವರದಿ ಒಪ್ಪಿಸುವ ನೀತಿ ಇತ್ಯಾದಿಗಳನ್ನು ಸಾಲ್ಕಿಯಾ ಪ್ಲೀನಮ್ ನಂತರ ಅನುಸರಣೆಗೆ ತರಲು ಪ್ರಯತ್ನಿಸಲಾಯಿತು.

III

ಪಕ್ಷದ ಸಂಘಟನಾತ್ಮಕ ಕಾರ್ಯನೀತಿ ಬದಲಾಗಿದ್ದರೂ ಅನೇಕ ಕಾಮ್ರೇಡ್‌ಗಳು ಅದರ ಸತ್ವವನ್ನು ಮೈಗೂಡಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ ಹಾಗೂ ಹಳೆಯ ರೀತಿಯಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ಸಂಗಾತಿಗಳು ತಮ್ಮ ಪ್ರದೇಶದಲ್ಲೇ ಪಕ್ಷವನ್ನು ವಿಸ್ತರಿಸುವುದರ ಅಗತ್ಯವನ್ನು ಮನಗಾಣಲಾರದವರಾಗಿದ್ದಾರೆ. ಕೆಲವು ಕ್ರಾಂತಿಕಾರಿ ಭಾವುಕ ಪರಿಕಲ್ಪನೆಗಳು ಹೊಸ ಸದಸ್ಯರನ್ನು ಸೇರಿಸಿಕೊಳ್ಳುವಲ್ಲಿ ಅವರಿಗೆ ಅಡ್ಡಿಯಾಗುತ್ತವೆ. ಪ್ರತಿಯೊಬ್ಬ ಸದಸ್ಯನೂ ಒಬ್ಬ ಪರಿಪೂರ್ಣ ಕಮ್ಯುನಿಸ್ಟ್‌ನ ಗುಣಗಳನ್ನು ಹೊಂದಿರುವುದು ಸಾಧ್ಯವಿಲ್ಲ. ಪರಿಪೂರ್ಣತೆ ಸಾಧಿಸುವ ಪ್ರಯತ್ನ ಸದಾ ನಡೆಯುತ್ತಿರುತ್ತದೆ. ಯಾರೊಬ್ಬನೂ ಒಬ್ಬ ಪರಿಪೂರ್ಣ ಕಮ್ಯುನಿಸ್ಟ್‌ನ ಎಲ್ಲಾ ಉತ್ತಮ ಗುಣ ಹೊಂದಬೇಕೆಂದು ನಿರೀಕ್ಷಿಸಲಾಗದು. ನಾಲ್ಕು ಕನಿಷ್ಟ ಕರ್ತವ್ಯಗಳು ಅಂದರೆ ಶಾಖಾ ಸಭೆಗಳಿಗೆ ಹಾಜರಾಗುವುದು, ಪಕ್ಷಕ್ಕೆ ಸಲ್ಲಬೇಕಾದ ಹಣ (ಲೆವಿ) ಸಲ್ಲಿಸುವುದು, ಪಕ್ಷದ ಪತ್ರಿಕೆಯನ್ನು ಓದುವುದು ಹಾಗೂ ಪಕ್ಷದ ನಿರ್ದೇಶಕ್ಕನುಗುಣವಾಗಿ ಒಂದು ಸಾಮೂಹಿಕ ಸಂಘಟನೆಯಲ್ಲಿ ಸಕ್ರಿಯವಾಗಿ ದುಡಿಯುವುದು ಇವನ್ನು ಪರಿಪಾಲಿಸುವ ಒಬ್ಬ ಸಂಗಾತಿಗೆ ಪಕ್ಷದ ಸದಸ್ಯತ್ವವನ್ನು ನಿರಾಕರಿಸುವ ಹಕ್ಕು ನಮಗಿಲ್ಲ. ಇದರರ್ಥ ಎಲ್ಲರಿಗೂ ನಮ್ಮ ಪಕ್ಷದ ಬಾಗಿಲನ್ನು ತೆರೆದಿಡಬೇಕೆಂದೇನಲ್ಲ. ಪಕ್ಷದ ವಿಸ್ತರಣೆಯೊಂದಿಗೆ ಅದನ್ನು ದೃಢಪಡಿಸುವ ಕೆಲಸವನ್ನೂ ಮಾಡಬೇಕು. ಪಕ್ಷದ ಪ್ರಮುಖ ಘಟಕ ಯೋಜನೆ ಹಾಗೂ ಪ್ರೋತ್ಸಾಹದಿಂದ ಹೆಚ್ಚೆಚ್ಚು ಚಟುವಟಿಕೆಗಳಲ್ಲಿ ತೊಡಗುವುದರಿಂದ, ಪಕ್ಷದ ಸಂವಿಧಾನದಲ್ಲಿ ಹೇಳಿರುವ ಸಂಘಟನಾತ್ಮಕ ನೀತಿಗಳನ್ನು ಅನುಸರಿಸಿ, ಪ್ರಜಾಸತ್ತಾತ್ಮಕ ಕೇಂದ್ರವಾದಕ್ಕೆ ಬದ್ಧವಾಗಿದ್ದು, ವಾರ್ಷಿಕ ತಪಾಸಣೆ ಇತ್ಯಾದಿಗಳನ್ನು ನಡೆಸಿ ಇದನ್ನು ಸಾಧಿಸಬಹುದು.

ಇದೇ ರೀತಿ, ತಮ್ಮ ಪ್ರದೇಶದಿಂದ ಒಬ್ಬ ಸಂಗಾತಿಯನ್ನು ಮೇಲಿನ ಸಮಿತಿ ಕೊಟ್ಟಿರುವ ಕೆಲಸಕ್ಕಾಗಿ ಬಿಡುಗಡೆಮಾಡಲು ನಿರಾಕರಿಸುವ ಸಂಗಾತಿಗಳೂ ಇದ್ದಾರೆ. ಪ್ರತಿಯೊಬ್ಬನೂ ಕೆಳಗಿನ ಸಮಿತಿಗಳಲ್ಲಿ ದುಡಿಯಲೇಬೇಕೆನ್ನುವ ಪರಿಕಲ್ಪನೆ ವಿಸ್ತರಣೆ ಬೇಕೋ ಅಥವಾ ದೃಢಪಡಿಸಿಕೊಳ್ಳಬೇಕೋ ಎಂಬ ತಪ್ಪು ಕಾರ್ಯನೀತಿಯ ಪರಿಣಾಮವೇ. ಕೆಳಗಿನ ಘಟಕಗಳು ಮೇಲಿನ ಘಟಕಗಳಿಗಾಗಿ ಕೆಲಸ ಮಾಡಲು ಸಂಗಾತಿಗಳನ್ನು ಬಿಟ್ಟುಕೊಡದಿದ್ದರೆ ಪಕ್ಷದ ವಿಸ್ತರಣೆಯೂ ಸಾಧ್ಯವಿಲ್ಲ, ಕ್ರೋಢೀಕರಣವೂ ಸಾಧ್ಯವಿಲ್ಲ. ಸರಿಯಾದ ಕಾರ್ಯನೀತಿಯನ್ನು ಪಾಲಿಸಬೇಕಾದರೆ ಮೇಲಣ ಸಮಿತಿಯ ಕೆಲಸಗಳಿಗೆ ಯಾವಾಗಲೂ ಆದ್ಯತೆ ನೀಡಬೇಕು.

ಪಕ್ಷದ ಎಲ್ಲಾ ಸದಸ್ಯರು ಸರಿಯಾದ ಸಂಘಟನಾತ್ಮಕ ನೀತಿಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಹಾಗಾದಾಗ ಮಾತ್ರ ಪಕ್ಷದ ಧೋರಣೆಗಳನ್ನು ರೂಪಿಸುವುದರಲ್ಲಿ ಹಾಗೂ ಅವನ್ನು ಕಾರ್ಯರೂಪಕ್ಕೆ ತರುವಲ್ಲಿ ಎಲ್ಲಾ ಸದಸ್ಯರು ಪಾಲುಗೊಳ್ಳಲು ಸಾಧ್ಯವಾಗುತ್ತದೆ.

—ವಿ. ಜೆ. ಕೆ. ನಾಯರ್

ಪ್ರತಿನಿಧಿಗಳಿಗೆ ಸೂಚನೆ

ಪಕ್ಷದ ಹನ್ನೊಂದನೇ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಹನ್ನೊಂದನೇ ಸಮ್ಮೇಳನವು 1981 ಡಿಸೆಂಬರ್ 11 ರಿಂದ 14ರವರೆಗೆ ಮಂಗಳೂರಿನಲ್ಲಿ ಜರಗಲಿದೆ. ಕಾಂ. ಪಿ. ರಾಮಚಂದ್ರರಾವ್ ಅವರು ಅಧ್ಯಕ್ಷರಾಗಿಯೂ, ಕಾಂ. ಕೆ. ಆರ್. ಶ್ರೀಯಾನ್ ಅವರು ಕಾರ್ಯದರ್ಶಿಯಾಗಿಯೂ ಇರುವ 251 ಮಂದಿಯ ಸ್ವಾಗತಸಮಿತಿಯು ಸಮ್ಮೇಳನವನ್ನು ಯಶಸ್ವಿಗೊಳಿಸಲು ಹಗಲಿರುಳು ಶ್ರಮಿಸುತ್ತಿದೆ. ಪ್ರತಿನಿಧಿ ಶುಲ್ಕ ರೂಪಾಯಿ 10/- ಎಂದು ನಿರ್ಣಯಿಸಲಾಗಿದೆ.

ಪ್ರತಿನಿಧಿಗಳು 10ನೇ ತಾರೀಕು ರಾತ್ರಿಯೊಳಗೇ ಮಂಗಳೂರನ್ನು ತಲಪುವುದು ಉತ್ತಮ. 11ನೇ ತಾರೀಕು ಬೆಳಿಗ್ಗೆ 8 ಗಂಟೆಯೊಳಗೆ ಎಲ್ಲಾ ಪ್ರತಿನಿಧಿಗಳೂ ಕಡ್ಡಾಯವಾಗಿ ಮಂಗಳೂರನ್ನು ತಲುಪಲೇಬೇಕು. ಮಂಗಳೂರು ಹಂಪನ್‌ಕಟ್ಟಾ ಬಸ್ ನಿಲ್ದಾಣದಲ್ಲಿ 10ರಂದು ಮಧ್ಯಾಹ್ನ ಮೇಲಿಂದ 11ರಂದು ಮಧ್ಯಾಹ್ನದ ತನಕ ಸ್ವಯಂಸೇವಕರಿರುವರು.

ಸಮ್ಮೇಳನದ ಕೊನೆಯದಿನ, ಅಂದರೆ 14ರಂದು ಮಧ್ಯಾಹ್ನ ಮೇಲೆ ಎರಡು ಸಹಸ್ರ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರಿಂದ ಕೂಡಿದ ಭಾರಿ ವರ್ಣರಂಜಿತ ಮೆರವಣಿಗೆ ನಡೆಯಲಿದೆ. ಅದಾದ ಮೇಲೆ ಸಂಜೆ ನೆಹರೂ ಮೈದಾನಿನಲ್ಲಿ ಭಾರಿ ಬಹಿರಂಗ ಸಭೆ ನಡೆಯಲಿದೆ. ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ಪ್ರಧಾನಕಾರ್ಯದರ್ಶಿಯವರಾದ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್ ಅವರು ಮತ್ತು ಕೇಂದ್ರ ಸಮಿತಿ ಸದಸ್ಯ ಕಾಂ. ಆರ್. ಉಮಾನಾಥ್ ಅವರೂ ಮತ್ತಿತರ ಮುಖಂಡರುಗಳೂ ಭಾಷಣ ಮಾಡಲಿದ್ದಾರೆ. ಕಾಂ. ಎಂ. ಕೆ. ಭಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಲಿರುವರು. 14 ರಂದು ಮೆರವಣಿಗೆ ಮತ್ತು ಬಹಿರಂಗ ಸಭೆಗಳಿಗೆ ರಾಜ್ಯದ ಬೇರೆ ಬೇರೆ ಕಡೆಯಿಂದ ಬರುವವರು, ಅಂದು ಬೆಳಿಗ್ಗೆಯೇ ಮಂಗಳೂರನ್ನು ತಲಪಬೇಕು. ಮಂಗಳೂರಲ್ಲಿ ಟೌನ್‌ಸಮಿತಿ ಕಛೇರಿ ಅಥವಾ ಪಕ್ಷದ ಬೋಳಾರದಲ್ಲಿರುವ ಕಛೇರಿಯನ್ನು ಸಂಪರ್ಕಿಸಬೇಕು. ಬೇರೆ ಬೇರೆ ಕಡೆಯಿಂದ ಬರುವವರು ಬ್ಯಾನರು, ಬಾವುಟ, ಕೆಂಪು ಸಮವಸ್ತ್ರ ಇತ್ಯಾದಿಗಳನ್ನು ತೆಗೆದುಕೊಂಡು ಬರಬೇಕು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಕೊನೆಯ ದಿನ ಚಾರಿತ್ರಿಕ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲು ಎಲ್ಲರೂ ಮುಂದಾಗಬೇಕು.

ಪಕ್ಷದ ರಾಜ್ಯಸಮಿತಿ ಸಭೆಯು 10ರಂದು ಬೆಳಿಗ್ಗೆ 10ಗಂಟೆಯಿಂದ ನಡೆಯಲಿರುವುದರಿಂದ, ರಾಜ್ಯ ಸಮಿತಿ ಸದಸ್ಯರು ಮತ್ತು ಖಾಯಂ ಆಹ್ವಾನಿತರು 10ರಂದು ಬೆಳಿಗ್ಗೆಯೇ ಬರಬೇಕು.

ಫೋನ್ : 23506

ಸಿ.ಪಿ.ಐ.(ಎಂ) ಕಛೇರಿ	ಸಿ.ಪಿ.ಐ.(ಎಂ) ಟೌನ್ ಕಮಿಟಿ
ಬೋಳಾರ	ಮೈದಾನ ಅಡ್ಡ ರಸ್ತೆ
ಮಂಗಳೂರು–575 001	ಮಂಗಳೂರು–575 001

ಎಂ. ಕೆ. ಭಟ್
ಕಾರ್ಯದರ್ಶಿ

ದಲಿತ ಸಂಘರ್ಷ ಸಮಿತಿಗೆ ನಾಂದಿ

(7ನೇ ಪುಟದಿಂದ)

ಬೇಕಾಗಿರುವುದು ವ್ಯವಸ್ಥೆಯ ಬದಲಾವಣೆ; ಟಾಟಾ-ಬಿರ್ಲಾಗಳು, ಭೂಮಾಲೀಕರು ದುಡಿಯುವ ಜನರನ್ನು ತುಳಿತಾ ಬಂದಿದ್ದಾರೆ. ಅದಕ್ಕಾಗಿ ನಮ್ಮ ಜವಾಬ್ದಾರಿ ಅರ್ಥಮಾಡಿಕೊಂಡು ತುಳಿತಕ್ಕೊಳಗಾದ ಜನ ಒಟ್ಟಾಗಿ ಸೇರಿಕೊಂಡು ಕೆಲಸಮಾಡಬೇಕಿದೆ" ಎಂದರು. ಇನ್ನೊಬ್ಬ ಭಾಷಣಕಾರ ವಿಶ್ವನಾಥರೆಡ್ಡಿಯವರು ಮಾತನಾಡುತ್ತಾ "ಇದು ಸಂಕೀರ್ಣ ಸಮಾಜ, ಕಳಕಳಿಯ ಜೊತೆಗೆ ವಿವೇಕವೂ ಬೆಳೆಯಬೇಕು" ಎಂದರು. ಶ್ರೀ ಎಂ. ಪಿ. ಪ್ರಕಾಶ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಪರಶುರಾಮ್ ಅವರು ಸ್ಥಳೀಯ ಅಂಬೇಡ್ಕರ್ ಅಸೋಸಿಯೇಷನನ್ನು ದ. ಸಂ. ಸ.ಯಲ್ಲಿ ವಿಲೀನಗೊಳಿಸಲಾಯಿತೆಂದು ಸಾರಿದರು.

ಆರಂಭದಲ್ಲಿ ಚನ್ನಬಸವಣ್ಣ ಸ್ವಾಗತಿಸಿದ ನಂತರ ಬಂಡಾಯದ ಗೆಳೆಯರಿಂದ ಕ್ರಾಂತಿಗೀತೆಗಳಾದವು. ಕಾರ್ಯಕ್ರಮದ ನಂತರ ಹೂವಿನಹಡಗಲಿ ಗೆಳೆಯರಿಂದ "ಸಂಗ್ಯಾ ಬಾಳ್ಯಾ" ನಾಟಕ ಪ್ರದರ್ಶಿಸಲ್ಪಟ್ಟಿತು.

ಹರಪನಹಳ್ಳಿ

8-11-81ರಂದು ಹರಪನಹಳ್ಳಿಯ ಅಂಬೇಡ್ಕರ್ ಹಾಸ್ಟೆಲ್ ವಿದ್ಯಾರ್ಥಿಗಳ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಬಸವರಾಜ (ಪ್ರಿನ್ಸಿಪಾಲರು) ವಹಿಸಿದ್ದರು. ಮುಖ್ಯ ಅತಿಥಿಯಾಗಿ ದಲಿತ ಸಾಹಿತಿ ಎಲ್. ಹನುಮಂತಯ್ಯ ಆಗಮಿಸಿದ್ದರು. ಕಾಂ. ಗುಡಿಹಳ್ಳಿ ನಾಗರಾಜರು ಹನುಮಂತಯ್ಯನವರನ್ನು ಸಭೆಗೆ ಪರಿಚಯಿಸಿದರು. ಕೊನೆಯಲ್ಲಿ ಸಿ. ಸೋಮಣ್ಣ ವಂದಿಸಿದರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT